'79



ಶ್ರೀರಂಗರ 75ನೆ ಹುಟ್ಟುಹಬ್ಬದ
ಅಭಿನಂದನಾ ಸಮಾರಂಭ

ಶ್ರೀರಂಗ 75

ರಂಗಸಂಪದ

ಖ್ಯಾತ ನಾಟಕಕಾರ ಶ್ರೀರಂಗರ 75ನೆ ಹುಟ್ಟುಹಬ್ಬದ

ಅಭಿನಂದನಾ ಸಮಾರಂಭ

ಮುಖ್ಯ ಅತಿಥಿ :

ಶ್ರೀ ವಿ. ಸೀತಾರಾಮಯ್ಯನವರು

ಸಮಾರಂಭದ ಅಧ್ಯಕ್ಷತೆ ಹಾಗೂ

ಗುಮ್ಮನೆಲ್ಲಿಹ ತೋರಮ್ಮ ನಾಟಕ (ಪುಸ್ತಕ) ಬಿಡುಗಡೆ :

ಶ್ರೀ ಬಿ. ಪುಟ್ಟಸ್ವಾಮಯ್ಯನವರು

ಕಲಾಕ್ಷೇತ್ರ | ಮಾರ್ಚ್ 29 / 1979 | ಸಂಜೆ 6ಕ್ಕೆ

ನಿಮಗೆ ಆದರದ ಸ್ವಾಗತ

ಕರ್ನಾಟಕ ಸಂಘ

ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಹುಬ್ಬಳ್ಳಿ

ಸಾಗರದ ಉದಯ ಕಲಾವಿದರಿಂದ

ಪದ್ಮಭೂಷಣ ಶ್ರೀರಂಗರ ಖ್ಯಾತ ನಾಟಕ

ಹುಟ್ಟಿದ್ದು ಹೊಲೆಯೂರು

ಪಾತ್ರ ವರ್ಗ

ವೆಂಕಪ್ಪ—ಎಂ. ಪಿ. ಲಕ್ಷ್ಮೀನಾರಾಯಣ
ಪ್ರಸಾದ್—ಡಿ. ವಿ. ಶಿವರಾಮಯ್ಯ
ಪದ್ಮನಾಭ—ಟಿ. ಎಸ್. ರಾಘವೇಂದ್ರ
ಇಂದುಮತಿ—ಮಮತ

ರಾಯರು—ಎನ್. ಆರ್. ಮಾಸೂರ್
ವ್ಯಕ್ತಿ—ಪಿ. ವಿ. ಕೃಷ್ಣಮೂರ್ತಿ ಹಾಗೂ
ಪ್ರಕಾಶ, ಬ್ರಹ್ಮಚಾರಿ, ಲಕ್ಷ್ಮೀನಾರಾಯಣ

ಹಿನ್ನೆಲೆ ಸಂಗೀತ : **ಯು. ಪ್ರಭಾಕರರಾವ**
ಸೂತ್ರಧಾರ : **ವಿ. ಆರ್. ರಘುಪತಿ** L.L B.,

ರಂಗಸಜ್ಜಿಕೆ, ಪ್ರಕಾಶನ : **ಉದಯ ಕಲಾವಿದರು, ಸಾಗರ.**
ನಿರ್ದೇಶನ : **ಎನ್. ಆರ್. ಮಾಸೂರ್**

ಹುಟ್ಟಿದ್ದು ಹೊಲೆಯೂರು

"ತಪ್ಪು ಮಾಡುವನು ಅಂದ್ರೆ ಮನುಷ್ಯ ಸ್ವಭಾವ" ಎಂದು ತನ್ನನ್ನೇ ಸಮರ್ಥಿಸಿಕೊಳ್ಳಬಯಸುವ ಶ್ರೀನಿವಾಸರಾಯರ ಮನಸ್ಸಿನ ಬಗೆಯನ್ನು ಚಿತ್ರಿಸುವ ಈ ನಾಟಕ ಮನುಷ್ಯ ಎಂತಹ ಮುಖವಾಡ ಧರಿಸಿದರೂ, ಅಂತಃಸಾಕ್ಷಿಗೆ ಎದುರಾಗಿ ನಡೆಯುವದು ತುಂಬಾ ಕಠಿಣ ಎಂಬುದನ್ನು ತೋರಿಸುತ್ತದೆ.

ನಾಟಕದ ತಂತ್ರ, ಸಂಭಾಷಣೆಯ ಚುರುಕು, ವಿಡಂಬನೆ, ಸೈಜತೆ, ಪಾತ್ರಸೃಷ್ಟಿ ಇವುಗಳಲ್ಲಿ ಶ್ರೀರಂಗರ ವೈಶಿಷ್ಟ್ಯವನ್ನು ಕಾಣಬಹುದು.

ಶ್ರೀರಂಗ

ಭಾರತದ ಕೆಲವೇ ಶ್ರೇಷ್ಠ ನಾಟಕಕಾರರಲ್ಲಿ ಒಬ್ಬರು. ೩೭ ಪೂರ್ಣಾವಧಿ ನಾಟಕಗಳನ್ನು ಬರೆದಿರುತ್ತಾರೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇಯತರು. ರಾಜ್ಯ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಅವರಿಗೆ ಕೇಂದ್ರ ಸರಕಾರವು ಪದ್ಮಭೂಷಣ ಪ್ರಶಸ್ತಿಯನ್ನಿತ್ತು ಗೌರವಿಸಿದೆ. ಇವರ ನಾಟಕಗಳು ಭಾರತೀಯ ರಂಗಭೂಮಿಯಲ್ಲಿ ಕನ್ನಡಕ್ಕೆ ಮಹತ್ವದ ಸ್ಥಾನ ಕೊಟ್ಟಿರುತ್ತವೆ. ಕೇಂದ್ರ ಸಂಗೀತ ಅಕಾಡೆಮಿಯ 'ಫೆಲೋಸಿಫ್' ಪಡೆದಿರುವ ಶ್ರೀ ಶ್ರೀರಂಗರ ಪ್ರತಿ ನಾಟಕದಲ್ಲೂ ಹೊಸತನವನ್ನು ಕಾಣಬಹುದು.

ಉದಯ ಕಲಾವಿದರು, ಸಾಗರ

ಈ ವರ್ಷ ಬೆಳ್ಳಿ ಹಬ್ಬವನ್ನು ಆಚರಿಸಲಿರುವ, ಸಾಗರದ ಉದಯ ಕಲಾವಿದರು, ಕಳೆದ ವರ್ಷ ಜಿಲ್ಲಾ ಅಕಾಡೆಮಿಯ ಆಶ್ರಯದಲ್ಲಿ ನಡೆದ ನಾಟಕ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ. ಈ ತಂಡ ಆಧುನಿಕ ಕನ್ನಡ ರಂಗಭೂಮಿಯ ಬೆಳವಣಿಗೆಗಾಗಿ ಪ್ರಯತ್ನಿಸುತ್ತಿದ್ದು ಹಲವಾರು ನಗರಗಳಲ್ಲಿ ನಾಟಕ ಪ್ರದರ್ಶನಗಳನ್ನು ನಡೆಸಿ ಪ್ರೇಕ್ಷಕರಲ್ಲಿ ಹೊಸ ಪ್ರಜ್ಞೆ ಮತ್ತು ಹೆಚ್ಚಿನ ಆಸಕ್ತಿಯನ್ನು ಹೊಂದಲು ಹುರುಪು ಕೊಟ್ಟಿರುತ್ತದೆ.

ಕನ್ನಡ ರಂಗಭೂಮಿಯ ಕ್ರಾಂತಿಕಾರಕ ಮುನ್ನಡೆಗೆ ಕಾರಣರಾದ ಶ್ರೀ ಶ್ರೀರಂಗರ ೧೭ ನಾಟಕಗಳನ್ನು ಪ್ರಯೋಗಿಸಿ ೯೨ಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡಿದೆ.

ಶ್ರೀ ಎಸ್. ಆರ್. ಮಾಸೂರ ಅವರು ಸುಮಾರು ೩೫ ವರ್ಷಗಳಿಂದ ವಿಲಾಸಿ ರಂಗಭೂಮಿಯ ಸಂಪರ್ಕವನ್ನಿಟ್ಟುಕೊಂಡು ನಟರಾಗಿ, ನಿರ್ದೇಶಕರಾಗಿ ಕೆಲಸ ಮಾಡಿರುತ್ತಾರೆ. ಇವರಿಗೆ ರಾಜ್ಯ ಸಂಗೀತ ನಾಟಕ ಅಕಾಡೆಮಿಯು ಈ ವರ್ಷ ಪ್ರಶಸ್ತಿಯನ್ನಿತ್ತು ಗೌರವಿಸಿದೆ.

ಕರ್ನಾಟಕ ಸಂಘ

ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಹುಬ್ಬಳ್ಳಿ

ಸಾಗರದ ಉದಯ ಕಲಾವಿದರಿಂದ

ಪದ್ಮಭೂಷಣ ಶ್ರೀರಂಗರ ಖ್ಯಾತ ನಾಟಕ

ಹುಟ್ಟಿದ್ದು ಹೊಲೆಯೂರು

ಪಾತ್ರ ವರ್ಗ

ವೆಂಕಪ್ಪ—ಎಂ. ಪಿ. ಲಕ್ಷ್ಮೀನಾರಾಯಣ
ಪ್ರಸಾದ್—ಡಿ. ವಿ. ಶಿವರಾಮಯ್ಯ
ಪದ್ಮನಾಭ—ಟಿ. ಎಸ್. ರಾಘವೇಂದ್ರ
ಇಂದುಮತಿ—ಮಮತ

ರಾಯರು – ಎನ್. ಆರ್. ಮಾಸೂರ್
ವ್ಯಕ್ತಿ—ಪಿ. ವಿ. ಕೃಷ್ಣಮೂರ್ತಿ ಹಾಗೂ
ಪ್ರಕಾಶ, ಬ್ರಹ್ಮಚಾರಿ, ಲಕ್ಷ್ಮೀನಾರಾಯಣ

ಹಿನ್ನೆಲೆ ಸಂಗೀತ : **ಯು. ಪ್ರಭಾಕರರಾವ**
ಸೂತ್ರಧಾರ : **ವಿ. ಆರ್. ರಘುಪತಿ** L.L B.,

ರಂಗಸಜ್ಜಿಕೆ, ಪ್ರಕಾಶನ : **ಉದಯ ಕಲಾವಿದರು, ಸಾಗರ.**
ನಿರ್ದೇಶನ : **ಎನ್. ಆರ್. ಮಾಸೂರ್**

ಹುಟ್ಟಿದ್ದು ಹೊಲೆಯೂರು

"ತಪ್ಪು ಮಾಡುವನು ಅಂದ್ರೆ ಮನುಷ್ಯ ಸ್ವಭಾವ" ಎಂದು ತನ್ನನ್ನೇ ಸಮರ್ಥಿಸಿಕೊಳ್ಳಬಯಸುವ ಶ್ರೀನಿವಾಸರಾಯರ ಮನಸ್ಸಿನ ಬಗೆಯನ್ನು ಚಿತ್ರಿಸುವ ಈ ನಾಟಕ ಮನುಷ್ಯ ಎಂತಹ ಮುಖವಾಡ ಧರಿಸಿದರೂ, ಅಂತಃಸಾಕ್ಷಿಗೆ ಎದುರಾಗಿ ನಡೆಯುವದು ತುಂಬಾ ಕಠಿಣ ಎಂಬುದನ್ನು ತೋರಿಸುತ್ತದೆ.

ನಾಟಕದ ತಂತ್ರ, ಸಂಭಾಷಣೆಯ ಚುರುಕು, ವಿಡಂಬನೆ, ನೈಜತೆ, ಪಾತ್ರಸೃಷ್ಟಿ ಇವುಗಳಲ್ಲಿ ಶ್ರೀರಂಗರ ವೈಶಿಷ್ಟ್ಯವನ್ನು ಕಾಣಬಹುದು.

ಶ್ರೀರಂಗ

ಭಾರತದ ಕೆಲವೇ ಶ್ರೇಷ್ಠ ನಾಟಕಕಾರರಲ್ಲಿ ಒಬ್ಬರು. ೩೬ ಪೂರ್ಣಾವಧಿ ನಾಟಕಗಳನ್ನು ಬರೆದಿರುತ್ತಾರೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇಯತರು. ರಾಜ್ಯ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಅವರಿಗೆ ಕೇಂದ್ರ ಸರಕಾರವು ಪದ್ಮಭೂಷಣ ಪ್ರಶಸ್ತಿಯನ್ನಿತ್ತು ಗೌರವಿಸಿದೆ. ಇವರ ನಾಟಕಗಳು ಭಾರತೀಯ ರಂಗಭೂಮಿಯಲ್ಲಿ ಕನ್ನಡಕ್ಕೆ ಮಹತ್ವದ ಸ್ಥಾನ ಕೊಟ್ಟಿರುತ್ತವೆ. ಕೇಂದ್ರ ಸಂಗೀತ ಅಕಾಡೆಮಿಯ 'ಫೆಲೋಸಿಫ್' ಪಡೆದಿರುವ ಶ್ರೀ ಶ್ರೀರಂಗರ ಪ್ರತಿ ನಾಟಕದಲ್ಲೂ ಹೊಸತನವನ್ನು ಕಾಣಬಹುದು.

ಉದಯ ಕಲಾವಿದರು, ಸಾಗರ

ಈ ವರ್ಷ ಬೆಳ್ಳಿ ಹಬ್ಬವನ್ನು ಆಚರಿಸಲಿರುವ, ಸಾಗರದ ಉದಯ ಕಲಾವಿದರು, ಕಳೆದ ವರ್ಷ ಜಿಲ್ಲಾ ಅಕಾಡೆಮಿಯ ಆಶ್ರಯದಲ್ಲಿ ನಡೆದ ನಾಟಕ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ. ಈ ತಂಡ ಆಧುನಿಕ ಕನ್ನಡ ರಂಗಭೂಮಿಯ ಬೆಳವಣಿಗೆಗಾಗಿ ಪ್ರಯತ್ನಿಸುತ್ತಿದ್ದು ಹಲವಾರು ನಗರಗಳಲ್ಲಿ ನಾಟಕ ಪ್ರದರ್ಶನಗಳನ್ನು ನಡೆಸಿ ಪ್ರೇಕ್ಷಕರಲ್ಲಿ ಹೊಸ ಪ್ರಜ್ಞೆ ಮತ್ತು ಹೆಚ್ಚಿನ ಆಸಕ್ತಿಯನ್ನು ಹೊಂದಲು ಹುರುಪು ಕೊಟ್ಟಿರುತ್ತದೆ.

ಕನ್ನಡ ರಂಗಭೂಮಿಯ ಕ್ರಾಂತಿಕಾರಕ ಮುನ್ನಡೆಗೆ ಕಾರಣರಾದ ಶ್ರೀ ಶ್ರೀರಂಗರ ೧೬ ನಾಟಕಗಳನ್ನು ಪ್ರಯೋಗಿಸಿ ೯೦ ಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡಿದೆ.

ಶ್ರೀ ಎಸ್. ಆರ್. ಮಾಸೂರ ಅವರು ಸುಮಾರು ೩೫ ವರ್ಷಗಳಿಂದ ವಿಲಾಸಿ ರಂಗಭೂಮಿಯ ಸಂಪರ್ಕವನ್ನಿಟ್ಟು ಕೊಂಡು ನಟರಾಗಿ, ನಿರ್ದೇಶಕರಾಗಿ ಕೆಲಸ ಮಾಡಿರುತ್ತಾರೆ. ಇವರಿಗೆ ರಾಜ್ಯ ಸಂಗೀತ ನಾಟಕ ಅಕಾಡೆಮಿಯು ಈ ವರ್ಷ ಪ್ರಶಸ್ತಿಯನ್ನಿತ್ತು ಗೌರವಿಸಿದೆ.

ಕಿರೀಟ
ಮಕುಟ
ಪತಾಲ
ಪಾತ್ರಗತ
or
ಪಾತ್ರಪತಾಲ

ದೇವತೆ
ರಾಕ್ಷಸ
ಗಂಧರ್ವ
ವಿದ್ಯಾಧರ } etc

This reminds me about DV Johnson's incidence

[illegible]
[illegible]
[illegible] —HVV

(ತೆರೆ ಎದ್ದಾಗ ರಂಗಸ್ಥಳ ಪೂರ್ತಿ ಬರಿದಾಗಿರುವುದು (ತೆರೆಯನ್ನು ಬಳಸದಿದ್ದರೆ ಹೆಚ್ಚು ಒಳ್ಳೆಯದು) ಆದರೆ ಒಂದೇ ಸಮನೆ ದೂರದಿಂದ ಜನ ಸಮ್ಮರ್ದದ ಸದ್ದು ಕೇಳಿಬರುತ್ತದೆ. ಅಷ್ಟರಲ್ಲಿ ಒಂದು ವ್ಯಕ್ತಿ (ರಂಗಸ್ಥಳದಲ್ಲಿ ಹಾಜರಿಲ್ಲ) ಅಧಿಕಾರವಾಣಿಯಿಂದ ಹೇಳುವುದು ಕೇಳ ಬರುವುದು. 'ಸಾಲಿನೊಳಗೆ ನಿಂತುಕೊಳ್ಳಿರಿ.....ಸರೀರಿ. ಮುಂದಿನೋರು ಒಂದಿಷ್ಟು ಮುಂದೆ ಸರೀರಿ. ಹಿಂದೆ ಜನ ಇನ್ನೂ ಬಹಳ ಬರ್ತಾ ಇದೆ. ಹಂ. ಸರೀರಿ. ಸರೀರಿ ಅಂದೆ." ಅಷ್ಟರಲ್ಲಿ ಪ್ರೇಕ್ಷಾಗೃಹದಿಂದ ತುಸು ಮಲಿನವಾದ ಬಟ್ಟೆಗಳನ್ನು ಧರಿಸಿದ ಸುಮಾರು 55—60ರ ವಯಸ್ಸಿನ ಒಂದು ವ್ಯಕ್ತಿ ಆಸನದಿಂದ ಎದ್ದು ಅವಸರದಿಂದ ರಂಗಸ್ಥಳದತ್ತ ಹೊರಡುತ್ತಾ ತಡೀರಿ, ತಡೀರಿ ಅದು ನನ್ನ ಜಾಗ, ನಾನು ಅಲ್ಲಿಯೇ ನಿಂತಿದ್ದೆ ಎನ್ನುತ್ತಾ ರಂಗಸ್ಥಳಕ್ಕೆ ನಡೆದು ಬಂದು ಸಾಲಾಗಿ ಜನ ನಿಂತಾರೆ ಎಂದು ಸೂಚಿಸುತ್ತಾ ರಂಗಸ್ಥಳದ ಹಿಂಬದಿಯ ಮಧ್ಯದತ್ತ ನಡೆಯುತ್ತಾ ಒಂದೆಡೆ ಒಮ್ಮೆಲೆ ನಿಂತು—ಯಾರನ್ನೋ ಸ್ಪಷ್ಟವಾಗಿ ನೋಡಿದಂತೆ ಮಾಡಿ, ನಕ್ಕು ಇದೆ—ಇಲ್ಲಿಯೆ—ನಿಮ್ಮ ಹಿಂದೇನೇ ನಾನು ನಿಂತಿದ್ದು. ಹೋಗುವಾಗ ನೋಡ್ಕೊಂಡ್ಹೋಗಿದ್ದೆ ಜಾಗ ಮರೀಬಾರದ್ದು—ಅಂತ ಹಹ. ನಿಮ್ಮ ಚೂಪಾದ ಮೀಸೆ ಲಕ್ಷ್ಯದಲ್ಲಿಟ್ಟುಕೊಂಡು— — (ಎನ್ನುತ್ತಾ ತಾನೂ ಸಾಲಿನಲ್ಲಿ ನಿಲ್ಲಬೇಕೆನ್ನುತ್ತಾ ಬದಿಯಿಂದ ಸರಿಯುವಾಗ—ಯಾರೋ ಹಿಂದಿನಿಂದ ತನ್ನನ್ನು ನೂಕಿದರೆಂಬುದನ್ನು ಸೂಚಿಸುವಂತೆ ಮುಂದೆ ಹೋರೀ ಹೋಗಿ ಮುಗ್ಗರಿಸಿ, ಸುಧಾರಿಸಿ ಕೊಂಡು ಸಿಟ್ಟಿನಿಂದ ನಿಂತು ತನ್ನನ್ನು ನೂಕಿದವನನ್ನು ನೋಡುವಂತೆ ನಟಿಸಿ)

ವ್ಯಕ್ತಿ:— ಏನರೀ ಇದು? ಮುದಿ ಮನುಷ್ಯನ್ನ ನೂಕ್ತೀರಿ ಅಲ್ಲ?.....ಹೌದು, ನಿಮ್ಮ ಮುಂದೆ ಬಂದೆ....ಆದರೆ ನಾನು ಆ ದಪ್ಪ ಮೀಸೆಯವರ ಹಿಂದೆ ನಿಂತಿದ್ದೆ ಅನ್ನೋದಕ ಅವರ ಹಿಂದೆ ಬಂದು ನಿಂತೆ. ನಿಮ್ಮ ಮುಂದೆ ನಿಲ್ಲಬೇಕು ಅಂತ ಬರಲಿ—ಏನಂದಿರಿ? ಅಲ್ಲರಿ—ಯಾವಾಗಿನಿಂದ ಅಲ್ಲಿ ನಿಂತಿಲಿ (ಹಟದಿಂದ) ನನ್ನ ಜಾಗ ಅದ—ಎಲ. ದಬ್ತೀರಿ, ಯಾಕ ಸಿಪಾಯಿ ಸಾಹೇಬರ? (ಅವನು ಲಾಠೀ ಎತ್ತಿದುದನ್ನು ಪೆಟ್ಟುಮುದುಡಿಕೊಂಡು ಸೂಚಿಸಿ, ಎಲ. ತಲೆ ಬಡೀತೀರೇನು? (ಮುಂದೆ ಧಾವಿಸಿಬಂದು ಪ್ರೇಕ್ಷಕರಿಗೆ) ನೀವೇ ನೋಡಿದ್ದಿರಲ್ಲ, ನಾ ಅಲ್ಲಿ ನಿಂತದ್ದನ್ನ? ಜೇಲ ನನ್ನ ಹೊಮ್ಮಗನ ಕೈಯಾಗೇ ಉಳಿದಿತ್ತು, ಅದನ್ನ ತರೋದಕ ಅಂತ—ಏನಂದಿರಿ? ಜೇಲ ಯಾಕ ಅಂದ್ರ? ಮತ್ತೆ ರೇಶನ ಕಾರ್ಡಿನೊಳಗ—(ಒಮ್ಮೆಲೆ ನೂರಾರು ಜನರು ಗಹಗಹಿಸಿನಕ್ಕದನಿ ಅದನ್ನು ಕೇಳಿ ಬೆರಗಾಗಿ ಇಡೀ ಸಾಲಿನ ಜನರತ್ತ ದೃಷ್ಟಿಯನ್ನು ಹಾಯಿಸುವವನಂತೆ ನಟಿಸಿ) ಏನು? (ಹೆದರಿಕೆಯ ಧ್ವನಿ) ಇದು ಸೀಮೆಎಣ್ಣೆಗಾಗಿ ನಿಂತ ಕ್ಯೂ ಅಲ್ಲ?.....ಅಂದೆ?.....ಯಾರು ಸತ್ತಾರ?..... ಅಂದ್ರ ಆ ದೊಡ್ಡ ಮನುಷ್ಯನ ಶವಕ್ಕ ಶ್ರದ್ಧಾಂಜಲಿ ಅರ್ಪಿಸೋ ಜನರ ಕ್ಯೂ ಏನು ಇದು? (ಮತ್ತೆ ಜನರ ನಗೆಯನ್ನು ಕೇಳಿ—ತಾನು ದೊಡ್ಡ ನಗೆಯನ್ನು ನಕ್ಕು) ಸಿನಿಮಾ, ಬಸ್ಸು, ಟಿಕೀಟು (ತಡೆದು) ಇದಕೂ ಮುಂಚೆ ಒಂದು ಕ್ಯೂ ನೇರಿದ್ದೆ, ಅದು ಟಿಕೆಟ ಕ್ಯೂ ಅಂತ ತಿಳೀತು. ಯಾವ ಟಿಕೆಟ ಅಂದ್ರೇನು? ಚುನಾವಣೆಗೆ ನಿಲ್ಲೋದಕ್ಕೆ ಟಿಕೆಟ ಅಂತ ಸಾವಿರಾರು ಜನ ನಿಂತಿದ್ದರು, ಇಲ್ಲಿ ಬಂದರೆ—ಇಲ್ಲಿ ಸತ್ತವರನ್ನು ನೋಡೋದಕೆ ಕ್ಯೂ, ಸಾಕಪ್ಪ—ಸಾಕು. ಇದೊಂದ್ರಲ್ಲಿ ನೋಡುವವರೇ ಇಲ್ಲ. ವಯಸ್ಸಾಯ್ತು—ಇನ್ನು ಸಾಯೋವರ ಕ್ಯೂ ಎಲ್ಲಿದೆ ಅಂತ ಹುಡುಕೊಂಡು ಹೋಗೋದೇ ಒಳ್ಳೇದು.

ತರಲಿಕ್ಕೋ? ಜೇಲಂತೂ ಬರಿದೇ ಅದ.

ತಲೀಬ್ಯಾಡ. [illegible] ಧರಾ ಮಾಡ್ತಾ ಇದ್ದೀರಲ್ಲ?

(ಅತ್ಯಂತ ವಿಷಾದದಿಂದ, ದಣಿದ ಹೆಜ್ಜೆಗಳಿಂದ ರಂಗಸ್ಥಳದ ಪಾರ್ಶ್ವ ಸುತ್ತು ಬಂದು ಪರಿಕ್ರಮಣವನ್ನು ಮಾಡಿ ಕೊನೆಗೆ ರಂಗದ ಮುಂಭಾಗದಿಂದ ಮಧ್ಯಕ್ಕೆ ಬಂದು ನಿಂತು ತನ್ನ ಬಲಗಡೆಗೆ ತಿರುಗಿ ನಿಂತು ಬಾಗಿಲನ್ನು ತೆರೆಯುವವನಂತೆ ಕೈಯಿಂದ ತಟ್ಟಿ—)

<u>ವ್ಯಕ್ತಿ</u> :— (ಚಕಿತನಾಗಿ) ಏನೆ—ಬಾಗಿಲಾ ಯಾರಾಕೆ ಮುಚ್ಚಿಕೊಂಡಾರ ಇವರು. (ಬಾಗಿಲನ್ನು ಬಡಿಯುತ್ತಾ) ಬಾಗಿಲಾ ತಗೀರಿ, ಯಾರಾರಿದ್ದೀರಿ ಒಳಗ? ನಾ ಯಾರು ಅಂದ್ರ? (ತಿರಸ್ಕಾರದ ಧ್ವನಿ) ಏ—ಹಗೀ ಬಾಗಿಲು. ನನ್ನ ದನಿ ಗುರುತು ಹತ್ತೊಲ್ಲದಿಲ್ಲೇನು? ಮೊದಲಿನ ಒಂದು ನೌಕರಿ ಆಗಿದ್ದರ ಹಿಂದೆಯೋ ಸಂಸಾರದಿಂದ ರಿಟೈರ್ ಅಗ್ಬಿಟ್ಟು—ಆಕೆಗೆ ಇನ್ನು ನನ್ನ ದನಿ ಗುರುತು ಹತ್ತೊಲ್ಲದಿಲ್ಲ. (ಬಾಗಿಲು ತೆರೆಯುತ್ತಿರುವಂತೆ ನಟಿಸಿ ನಾಲ್ಕು ಹೆಜ್ಜೆ ಬಲಗಡೆ ನಡೆದು ನಿಲ್ಲುವಷ್ಟರಲ್ಲಿ ಎದುರು ಬದಿಯಿಂದ ಅವನ ಹೆಂಡತಿ ಬರುವರು. ಆಕೆಗೆ) ಇಂಥಾ ಪರಿ ಬಾಗಿಲಾ ಯಾಕ ಭದ್ರಮಾಡಿ ಹಾಕಿದ್ದಿ ಹಗಲು ಹೊತ್ತಿನಲ್ಲಿ?

<u>ಹೆಂಡತಿ</u> :— (ಸಿಡುಕಿನ ದನಿ) ಯಾಕಂದ್ರೇನು? ದಿನಾ ನೀವೇ ಹೇಳ್ತಿರಲ್ಲ ಪೇಪರಿನೊಳಗ ಓದಿದ್ದನ್ನ ಹೆಂಗಸು ಒಬ್ಬಾಕೀನೇ ಮನಿವಳಗ ಇದ್ದರ———

<u>ವ್ಯಕ್ತಿ</u> :— (ಒಮ್ಮೆಲೆ ನಕ್ಕು) ಓಹೋ ಹುಡುಗ ಹೆದರಿಕೆ ಏನ್ನಿನಗ?

<u>ಹೆಂಡತಿ</u> :— ಬರೀ ಹುಡುಗರಲ್ಲ.

<u>ವ್ಯಕ್ತಿ</u> :— (ತಿಳಿಯದೆ) ಅಂದ್ರ? ಮತ್ತೆ ಯಾರು?

<u>ಹೆಂಡತಿ</u> :— (ತುಸು ಸಿಟ್ಟಿನಿಂದ) ಯಾರಾದ್ರೇನು? ಮುಂಡಗಂಡರು. (ಅವನ ಮುಖದಲ್ಲಿ ನಗೆ ಮೂಡುವುದನ್ನು ನೋಡಿ) ಅಂಥಾ ಅಸಭ್ಯ ಮಾತ ನನ್ನ ಬಾಯಿಯಿಂದಲೇ ಅನಿಸ್ಲೀಕು ಅಂತೀರೇನು?

<u>ವ್ಯಕ್ತಿ</u> :— ಹುಂ—(ಎನ್ನುತ್ತಾ ಒಂದುಸಾ ಆಕೆಯನ್ನು ದೃಷ್ಟಿಸಿ ಪ್ರೇಕ್ಷಕರತ್ತ ತಿರುಗಿ ಅವರಿಗೆ ಕಣ್ಸನ್ನೆಯಿಂದ ಹೆಂಡತಿಯನ್ನು ಸೂಚಿಸುತ್ತಾ) ಕೇಳಿದಿರಾ? ಆಕೆ ಏನ್ಹೇಳ್ಬೇಕಂತಾಳ ನಿಮಗೂ ತಿಳಿದಿರಬೇಕಲ್ಲ! (ಪ್ರೇಕ್ಷಕರಿಗೆ ರಹಸ್ಯವನ್ನು ಹೇಳುವವನಂತೆ) ಕನ್ಯಾಪರೀಕ್ಷಾದ ಕಾಲಕ್ಕ ನಮ್ಮಪ್ಪನ ಬದಲು ನಾನೇ ಆಕೀನ್ನ ನೋಡಿದ್ದರೆ ಒಪ್ತಿದ್ದಿಲ್ಲ, ಅಂಥಾದ್ದು ಅಲ್ಗಂಟಾ ಮುದುಕಿ ಆಗ್ಯಾಳ. ಆದರೂ—(ಹೆಂಡತಿಗೆ ಧೈರ್ಯವನ್ನು ಕೊಡುವವನಂತೆ) ಛೆ. ಛೆ. ಅಂಥಾದ್ದಕ್ಕೆಲ್ಲಾ ಹೆದರಬೇಕೆ ನೀನು? ನಾನು ನೌಕರಿಯೊಳಗ ಇದ್ದಾಗ ಪೋಲೀಸ ಡಿಪಾರ್ಟಮೆಂಟಿನ ಸಂಬಂಧ ಇತ್ತು ನನಗ. ಬೇಕಿದ್ದರ ಒಬ್ಬಬ್ಬ ಪೋಲೀಸ್ ಅಧಿಕಾರಿಗಳಿಗೆ ಹೇಳ್ತೀನಿ:—ನಂ ಮನೇಕಡೆ ಲಕ್ಷ್ಯ ಇರಲಿ ಅಂತ ಅಂದ್ಬಿಡ್ಲೋ? (ಹಿರಿತನದ ನಗೆ)

<u>ಹೆಂಡತಿ</u> :— ಏನಾಯ್ತು ಮತ್ತ? ಪೋಲೀಸರಿ ಅಂತ ಕೆಲಸಮಾಡ್ತಾರಂತ—

<u>ವ್ಯಕ್ತಿ</u> :— (ನಿರುತ್ತರನಾದುದಕ್ಕೆ ಕನಲಿ) ಎಲ್ಲಾರು ಅಂಥವರೇ ಇರೋದಿಲ್ಲ. ನನಗೆ ಗೊತ್ತಿದ್ದವರು ಕೆಲವರು ಸಂಭಾವಿತರಿದ್ದಾರ.....ಅವರಿಗೆ—ಈಹೊತ್ತೆ ಒಬ್ಬ ಭೇಟಿಯಾಗಿದ್ದ.

<u>ಹೆಂಡತಿ</u> :— (ಸಂಶಯದಿಂದ) ಅಂದ್ರ ನೀವೇನು ಪೋಲೀಸ್ ಠಾಣೇಕ್ಕ ಹೋಗಿದ್ರೋ ಏನ ರೀಜನ್ ತರಲಿಕ್ಕೋ? ಜೇಲಂತೂ ಬರಿದೇ ಅದ.

ತಲೀಬ್ಯಾಡ. ಇಬ್ಬರೂ [illegible] ಥರಾ ಮಾಡ್ತಾ ಇದ್ದೀರಲ್ಲ?

ವ್ಯಕ್ತಿ :— (ತುಸು ಸಿಟ್ಟಿನಿಂದ) ಅದೇ ಹೇಳ್ತೀನಿ ಕೇಳು—ರೇಶನದ ಅಂಗಡಿಗೆ ಹೋಗಿದ್ದೆ. ಕ್ಯೂ ಅಂದ್ರೆ ಕ್ಯೂ—ಅಷ್ಟುದ್ದ. ನನ್ನ ಗುರುತಿನವ ಒಬ್ಬ ಸಾಲಿನೊಳಗೆ ನಿಂತವ ನನ್ನ ನೋಡಿ— 'ರಾಯರ, ಒಳ್ಳೇದಾಂಗಾಯ್ತು ನೀವು ಬಂದದ್ದು' ಅಂದ 'ಯಾಕ? ಏನಾಗದ? ಅಂತ ಕೇಳಿದೆ. ನೋಡ್ರಿ. ಮೂರ್ತಾಸಾತು ಇನ್ನೂ ಅಂಗಡಿ ಬಾಗಿಲಾನೇ ತೆರೆದಿಲ್ಲ. ನಮ್ಮನ್ನು ಯಾರು ಕೇಳ್ತಾರೆ? ಅಂದ. ನೋಡ್ತೀನಿ ನಾನು, ಏನಾಗೇದ ಅಂತ' ಅಂದೆ ನಾ. 'ರಾಯರ, ನಿಮ್ಮಂಥವರು ಕೇಳಿದರೆ ಅವನು ಬಾಗಿಲಾನ್ರ ತಗೀಬಹುದು'. ಅಂದ ನಾ ಹೊರಟೆ. ಹಿಂದೆ ತಿರುಗಿ ನೋಡಿದರೆ ಅವ ತನ್ನ ಹಿಂದು ಮುಂದಿನವರಿಗೆ ನಾನು ಸರಕಾರೀ ನೌಕರಿಯೊಳಗಿದ್ದೆ ಏನಿದ್ದೆ, ಹ್ಯಾಗಿದ್ದೆ ಅನ್ನೋದನ್ನ ಹೇಳ್ತಿದ್ದ. ಹ ಹ ಹ.....

ಹೆಂಡತಿ :— ಹೋಹೋ ಅದೆಲ್ಲಾ ನನಗೊತ್ತದ ಹಿಂದಿನ ಕತೆ. ಅವರು ಹೊಗಳಿದರೆ ನಮ್ಮ ಹೊಟ್ಟೆ ತುಂಬೋದಿಲ್ಲಾ. ರೇಶನ್ ಯಾಕ ತರಲಿಲ್ಲ ಅಂತ ನಾ—

ವ್ಯಕ್ತಿ :— (ಸಿಟ್ಟಿನಿಂದ ಗದರಿಸಿ) ಅದನ್ನೇ ಹೇಳ್ತೀನಿ, ಕೇಳಿಕೋ ಮಾರಾಣಿ. ಭರ್ಭರ ಇಡೀ ಸಾಲನ್ನು— ಹಹ. ಗಾರ್ಡ್ ಆಫ್ ಆನರದ ಹಾಗೆ ನೋಡ್ತಾ ಹೋದೆ. ಅಂಗಡೀ ಬಾಗಿಲು ಮುಚ್ಚಿತ್ತು... ಹಹ. ನೌಕರೀವಳಗ ಇದ್ದಂವ. ಆಗ ಇವರ ಟ್ರಿಕ್ ಎಲ್ಲಾ ಗೊತ್ತು. ಹಿಂದಿನ ಬಾಗಿಲಿಗೆ ಹೋದೆ. ಮಾಲಿಕ ಕೂತಿದ್ದ. 'ಯಾಕರೀ? ಇಷ್ಟೊತ್ತೀನು ಅಂಗ್ಡೀ ತೆಗೆದಿಲ್ಲ? ಅಂದೆ. ಸಾಹೇಬರ, ಬೇಕಿದ್ದರ ನಿಮಗ ಕೊಡ್ತೀನಿ. ಆದರೆ ನಮ್ಮ ಮುಂದಾಳು ಸತ್ತಿದ್ದರಿಂದ ಅಂಗಡೀ ಮುಚ್ಚಬೇಕು ಅಂತ ಆರ್ಡರ ಹೊರಟದ' ಅಂದ.

ಹೆಂಡತಿ :— ಮತ್ತೆ ತರಲಿಲ್ಲ ಯಾಕೆ? ಬೇಕಿದ್ದರೆ ನಿಮಗೆ ಕೊಡ್ತೀನಿ ಅಂದಿದ್ನಲ್ಲ.

ವ್ಯಕ್ತಿ :— ಏನ್ ಬುದ್ಧಿ ಹೆಂಗಸಿನದು ಅಂತೀನಿ. ನಗರಕ್ಕೆ ನಗರ ಶೋಕ ಸಾಗರದಲ್ಲಿ ಮುಳುಗಿದಾಗ, ಅಂಗ್ಡೀ ಮುಚ್ಚಬೇಕು ಅಂತ ಆರ್ಡರ ಇದ್ದಾಂಗ, ದಿನಸಿ ನಾಗರೀಕರಿಗೆ ಸಿಕ್ಕದೇ ಇದ್ದಾಂಗ. ನಾನು—

ಹೆಂಡತಿ :— (ನಡುವೆಯೇ, ಹಣೆ ತಟ್ಟಿಕೊಂಡು) ನನ್ನ ಹಣೆ ಬರಹ. ರೇಶನ ತಕ್ಕೊಂಡರೂ ಗುಲಾಮಗಿರಿ ಹೋಗಿಲ್ಲಾ. ರೇಶನ ಬ್ಯಾಡ ಅಂತ ದುಡ್ಡವರು ಇಷ್ಟೊತ್ತು ಏನ್ಮಾಡಿದಿರಿ?

ವ್ಯಕ್ತಿ :— (ಗಾಂಭೀರ್ಯ ತಾಳಿ) ಏನ್ಮಾಡಿದೆ ಅಂದ್ರೆ? ಸತ್ತ ಮುಂದಾಳಿಗೆ ನಮ್ಮ ಶ್ರದ್ಧಾಂಜಲಿ ಅರ್ಪಿಸೋಣ ಅಂತ ಅವನ ಮನಿಗೆ ಹೋದೆ..... ಅಲ್ಲಿ ಒಂದು ಕ್ಯೂ ಕ್ಯೂ.... ಅಂದ್ರೆ ಹೇಳಿದೆನಲ್ಲ ಇಷ್ಟೊತ್ತು ಒಬ್ಬ ಪೋಲೀಸ್ ಬೇಟಿಯಾಗಿದ್ದ ಅಂತ? ಅಲ್ಲಿಂಯ ಅವನ ಬೇಟಿಯಾದ್ದು. ನನ್ನ ನೋಡಿದ ಕೂಡಲೇ ಸಲಾಂ ಹೊಡೆದ 'ನಿಮಗ ಒಳಗ ಹೋಗಬೇಕಾಗದೇನು, ಸಾಹೇಬರ?' ಅಂದ. ನಾ ಅಂದೆ, ಇಂಥಾ ಕ್ಯೂ ಇದ್ದಾಂಗ ಯಾವಾಗ ಚಾನ್ಸ್ ಸಿಕ್ಯಾದು' ಅಂತ. 'ಕ್ಯೂ ಅಲ್ಲಿಂಯೇ ನಿಂತಿರ್ಲಿ ನೀವು ಈಕಡೆ ಬರ್ರಿ, ಸಾಹೇಬರ' ಅಂತ ಕರಕೊಂಡು ಹೋದ ಒಳಗೆ—(ಒಮ್ಮೆಲೆ ಮುಂದಿನ ಜನಸಮೂಹದ ಶಿರಸ್ತ್ಯಾದರ ಗಹಗಹಿಸಿಯು ನಗೆ ಕೇಳಿಸಿದಂತಾಗಿ, ಗಾಬರಿಗೊಂಡವನಂತೆ ಸುತ್ತಲೂ ನೋಡುವನು)

ಹೆಂಡತಿ :— (ಚಕಿತಳಾಗಿ) ಯಾಕೋ? ಅವರು ಅಂತಾರ ಬಾಗಿಲು ಹಾಕಬ್ಯಾಡ ಅಂತ, ನೀ ಅಂತೀ ತೆರೀಬ್ಯಾಡ. ಇಬ್ಬರೂ ಒಂದೊಂದು ಥರಾ ಮಾಡ್ತಾ ಇದ್ದೀರಲ್ಲ?

ಹೆಂಡತಿ :— ನೀವು ಒಳಗೆ ಹೋಗಿದ್ದರೇನು? (ಅವನಿಂದ ಉತ್ತರವಿಲ್ಲ, ಬೇಜಾರಾದ ದನಿಯಲ್ಲಿ) ನಡೀರಿ, ಹೊದ ಮುಂದ ಕಾಂತಂ ಬಂಡವರ ಮೊದಲು ಸ್ನಾನ ಮಾಡಿರಿ, ಏಳಿರಿ.

(ದೃಶ್ಯ ಬದಲಾವಣೆಗಾಗಿ)

(ಜನರ ಕೂಗಾಟ, ಚೀರಾಟ, ಸಿಳ್ಳು ಮುಂತಾದ ಗಲಾಟೆಯು ಸದ್ದಿನೊಡನೆ ಬೆಳಕು ಬರುವುದು. ಕೈಯಲ್ಲಿ ಲಾಠಿ ಹಿಡಿದ ಪೋಲೀಸನೊಬ್ಬ ಕಕ್ಕಾಬಿಕ್ಕಿಯಾಗಿ ಗಾಬರಿಗೊಂಡು ಅತ್ತಿತ್ತ ಪಾರಾಗುವುದನ್ನು ನೋಡಿಸುತ್ತಾ ಧಾವಿಸುತ್ತಿರುತ್ತಾನೆ. ಇನ್ನು ಯಾರೂ ರಂಗಸ್ಥಳದಲ್ಲಿ ಇಲ್ಲದಿದ್ದರೂ ತನ್ನನ್ನು ಎಲ್ಲ ಕಡೆಯಿಂದ ಜನರ ಗುಂಪು ಅಡ್ಡಗಟ್ಟುತ್ತಿರುವುದನ್ನು ಚಿತ್ರಿಸ ಜಾರಿ ಬಿದ್ದ, ಅತ್ತಿತ್ತ ಮುಗ್ಗರಿಸುವ ಪೋಲೀಸನು ನಟಿಸುತ್ತಾನೆ. ಜನರು ಕೂಗುಗಳು ಕೇಳಿಬರುವುವು. 'ಬಡಬ್ಯಾಡಿರಿ ಅವನ್ನ' ಹಾಕಿರಿ ಅವನ್ನ ನೆಲಕ್ಕೆ—ಪೋಲೀಸ ಉರುಳುವನು—'ಮುದುಕರನ್ನೋದಿಲ್ಲ, ಹೆಂಗಸರು ಅನ್ನೋದಿಲ್ಲ, ಮಕ್ಕಳು ಅನ್ನೋದಿಲ್ಲ, ಲಾಠಿನೇ ಎತ್ತತಾನ? 'ಕಸಿದುಕೊಳ್ಳಿರಿ ಅವನ ಕೈಯೊಳಗಿನ ಲಾಠಿನ್ನ'—ಲಾಠೀ ಜಾರಿಬೀಳುವುದು—'ಕರೀ ಪ್ಯಾಂಟ ಹಾಕಿದ ಅಂದ್ರ ಲಾಠೀ ಎತ್ತೋದೇ ತನ್ನ ಕೆಲಸ ಅಂತ ತಿಳಿದಾನ, ಏಳೀರಿ ಅವನ ಪ್ಯಾಂಟನ್ನ'—ಅದನ್ನು ತಪ್ಪಿಸುವವನಂತೆ ಅವನು ನೆಲದ ಮೇಲೆ ಉರುಳಾಡುತ್ತಾ ನಟಿಸುವಾಗ ಪ್ಯಾಂಟ ಕಳಚುವುದು. ಅವನು ಅತ್ಯಂತ ಗಾಬರಿಯಿಂದ ಇದಿರು ಮೈಮೇಲೆ ಪೆಟ್ಟುಗಳು ಬೀಳುತ್ತಿವೆ, ಅವನ್ನು ತಾನು ತಪ್ಪಿಸುತ್ತಿದ್ದಾನೆ ಎಂದು ನಟಿಸುತ್ತಾ—ಬೇಗದಿಂದ ರಂಗಸ್ಥಳದಿಂದ ಓಡುವನು. 'ಬಿಡಬ್ಯಾಡಿರಿ ಅವನ್ನ' ಎನ್ನುತ್ತ ತರುಣನೊಬ್ಬ ಧಾವಿಸಿ ಬರುವನು. ಆಗಾಗ ಪೋಲೀಸರು ದೊಡ್ಡ ಕಲ್ಲುಗಳನ್ನು ಒಗೆಯುವುದನ್ನು ನಟಿಸುವರು).

ತರುಣ :— (ನಿಂತು ಉಸಿರೆಳೆದು ದಣಿವಾರಿಸಿಕೊಳ್ಳುತ್ತಾ) ಅವನ್ನ ಉಳಿಸಬಾರದಿತ್ತು. ನಂ ಜೀವನದ ಬೆಲೆ ಇಲ್ಲ ಅವರಿಗೆ, ಸಾವ್ಕಾಶ (ಎನ್ನುವಾಗ ದೂರದಿಂದ ಪೋಲೀಸ ಜೀಪಿನ ಸೈರನ್ ಸದ್ದು ಕೇಳಿಸುವುದು. ತರುಣ ಹೆದರಿಕೆಯಿಂದ ಲಕ್ಷ್ಯಕೊಟ್ಟು ಕೇಳುವಾಗ—'ಬಂದೂಕಿನ ಸಿಪಾಯಿ ಬಂದರು, ಅಡಗಿಕೊಳ್ಳಿರಿ' 'ಹಿಡಿ' ಮಾಳಿಗೇ ಮ್ಯಾಲಿಂದ ಜಿಗಿಸಿರಿ ಕಲ್ಲ'. ಮುಂತಾಗಿ ಕೂಗುಗಳು ಕೇಳುವಾಗ ಹೇಗೆ ಪಾರಾಗಬೇಕೆಂದು ಅತ್ತಿತ್ತ ಕಣ್ಣು ಹಾಯಿಸುತ್ತಾ) ನನ್ನ ಕೈಯೊಳಗೂ ಬಂದೂಕು ಇದ್ದರೆ— (ಸೈರನ್ ಸದ್ದು ತೀರ ಹತ್ತಿರ ಬರಲು ಓಡುವರು. ಮುಂದಿನ ಪಾತ್ರದಂತೆ ಇವನೂ ಪೂರ್ತಿ ರಂಗಸ್ಥಳದ ಎರಡು ಪರಿಕ್ರಮಣಗಳನ್ನು ಹೂಡುವನು. ಕ್ರಮೇಣ ಸದ್ದು ದೂರವಲ್ಲಿದಂತೆ—ಕೇಳುವಾಗ ಎರಡನೆಯ ಪರಿಕ್ರಮಣವನ್ನು ಮುಗಿಲು ದಾಟದ ಮುಂತಾದಿಯು ಮುಖ್ಯಕ್ಕೇ ಬಂದು ತನ್ನ ಬಲಬದಿಗೆ ತೆರೆದ ಬಾಗಿಲು ಇದ್ದಂತೆ ಹೊಸ್ತಿಲು ದಾಟುವುದನ್ನು ನಟಿಸಿ ಒಮ್ಮೆಲೆ ಬಾಗಿಲಿನ ಎರಡೂ ಫಲಕಗಳನ್ನು ಜೋರಾಗಿ ಮುಚ್ಚುವಂತೆ ನಟಿಸುವನು. ಆ ಸದ್ದನ್ನು ಕೇಳಿ ಬಲಬದಿಯಿಂದ ಹೆಂಡತಿ ಬಂದು ತರುಣನನ್ನು ನೋಡಿ—)

ಹೆಂಡತಿ :— ಅಂತೂ. ನೀವ. ಎಂಥಾ ಪರಿ ಬಾಗಿಲಾ ಬಡಿದಿರೋ (ಆಚೆ ನೋಡಿ) ಮುಚ್ಚಿದಿ ಯಾಕೆ? (ಎನ್ನುತ್ತ, ನಡೆದು ಬಾಗಿಲನ್ನು ತೆರೆಯಲು ಕೈ ಹಾಕುವಾಗ—)

ತರುಣ :— (ಧಾವಿಸಿ ಬಂದು, ಆಕೆಯ ಕೈಯನ್ನು ಹಿಡಿದು) ತಡೀ ತಡೀ ಅವ್ವ, ಬಾಗಿಲ ತೆರೀಬ್ಯಾಡ.

ಹೆಂಡತಿ :— (ಚಕಿತಳಾಗಿ) ಯಾಕೋ? ಅವರು ಅಂತಾರ ಬಾಗಿಲು ಹಾಕಬ್ಯಾಡ ಅಂತ, ನೀ ಅಂತೀ ತೆರೀಬ್ಯಾಡ. ಇಬ್ಬರೂ ಒಂದೊಂದು ಥರಾ ಮಾಡ್ತಾ ಇದ್ದೀರಲ್ಲ?

ತರುಣ:— ತೇರಿ ಬ್ಯಾಡ· ಊರ ತುಂಬ ಗದ್ದಲಾ ನಡದದ· ಗೋಲೀಬಾರ ಆಗ್ಯಾದ ಇಷ್ಟರಲ್ಲಿಂದೇ ಆಗಿರಬೇಕು·

ಹೆಂಡತಿ:— (ಇನ್ನಷ್ಟು ಚಕಿತ) ಇದೇ ಈಗ ಇವರು ಹೇಳಿದರಲ್ಲ· ಅವಸತ್ತ್ಯಾನ ಅಂತ· ಗೋಲೀ ಬಾರ ಎಲ್ಲಿ?

ತರುಣ:— ಈ ಮುಂದಾಳಿನ ಮನೀ ಮುಂದ·

ಹೆಂಡತಿ:— (ಇನ್ನೂ ಚಕಿತ) ಇದೇ ಈಗ ಇವರು ಹೇಳಿದರಲ್ಲ· ಅವಸತ್ತ್ಯಾನ ಅಂತ·

ತರುಣ:— (ದ್ವೇಷದಿಂದ) ಅವ ಸತ್ತ್ರೇನಾಯಿತು? ಗುಂಡು ಹಾರಿಸುವವರು ಪೋಲೀಸರು·

ವ್ಯಕ್ತಿ:— (ಸ್ನಾನವನ್ನು ಮುಗಿಸಿ, ಒಂದು ಟವೆಲನ್ನು ಸುತ್ತಿಕೊಂಡು, ಇನ್ನೊಂದು ಟವೆಲಿನಿಂದ ತಲೆಗೂದಲನ್ನು ಒರೆಸಿಕೊಳ್ಳುತ್ತ, ಬರಿ ಮೈಯಿಂದ ರಂಗದ ಹಿಂಬದಿಯಿಂದ ಮಧ್ಯಕ್ಕೆ ಬಂದು ನಿಂತು) ಯಾರು ಗುಂಡು ಹಾರಿಸಿದರು?

ಹೆಂಡತಿ:— (ಅವನನ್ನು ಒಮ್ಮೆಲೆ ನೋಡಿ) ಕೇಳಿದಿರೋ? ನೀವು ಬ್ಯಾಗ ಬಂದೀರಿ ಖರೇ ಅಂದ್ರು· ಆ ಮುಂದಾಳಿನ ಮನಿಯಿಂದ ಗೋಲೀಬಾರಿ ನಡದದ ಅಂತ·

ವ್ಯಕ್ತಿ:— (ನಂಬದವನಾಗಿ) ಯಾರು ಹೇಳಿದರು?

ತರುಣ:— ಯಾರ ಯಾಕ ಹೇಳ್ಬೇಕು? ನಾನೇ ಕಣ್ಣಾರೆ ನೋಡಿನಿ·

ಹೆಂಡತಿ:— (ವ್ಯಕ್ತಿಗೆ) ಮತ್ತೆ ನೀವು ಹೇಳಿದಿರಿ ಆ ಮುಂದಾಳು ಸತ್ತ್ಯಾನಂತ·

ವ್ಯಕ್ತಿ:— (ಹಟದಿಂದ) ನಾನೇ ಒಳತನಕ ಹೋಗಿ ನೋಡಿ ಬಂದೆ ಅಂತ ಹೇಳಿದೆನಲ್ಲ?

ತರುಣ:— ಒಳಗಲ್ಲ, ಅವನ ಮನೀ ಹೊರಗ ಗೋಲೀಬಾರ ಆದದ್ದು·

ವ್ಯಕ್ತಿ:— (ಹಿರಿತನದಿಂದ) ಏನಾದರ್ರೂ ಹೇಳಬ್ಯಾಡಾ ಸತ್ತ್ಯಾವ ದೊಡ್ಡ ಮನುಷ್ಯ ಅನ್ನೋದಕ· ಅವನ ಅಂತ್ಯ ಸಂಸ್ಕಾರದ ಸಂದರ್ಭದೊಳಗ ತೋಫಿಗೆ ಸಲಾಮು ಅಂತ ಹಾರಿಸಿರಬೇಕು· ನಿಮ್ಮಂಥಾ ಹುಡುಗರಿಗೆ——

ತರುಣ:— (ನಡುವೆಯೇ ಹಟದ ದನಿಯಲ್ಲಿ) ತೋಫಿನ ಸಲಾಮು ಅಂತ ಮುಂದೆ ನಿಂತ ಜನರ ಮ್ಯಾಲೆ ತೋಫು ಹಾರಿಸೋದಿಲ್ಲ·

ವ್ಯಕ್ತಿ:— (ಇನ್ನೂ ನಂಬದೆ) ಛೆ· ಛೆ· ನನಗೆ ಖರೇ ಅನ್ನಿಸೋದಿಲ್ಲ· ಅಷ್ಟೊಂದು ಶ್ರದ್ಧೆಯಿಂದ ಮುಂದಾಳಿನ ಅಂತ್ಯದರ್ಶನಕ್ಕೆ ಬಂದ ಜನರ ಮ್ಯಾಲೆ ಎಂದಾದರೂ ಗುಂಡು ಹಾರಿಸೋದು ಶಕ್ಯ ಅದನ?

ತರುಣ:— ಕೈಯಲ್ಲೊಳಗೆ ಬಂದಂಥ ಹೊಟ್ಟೆಉರಿಗೆಯಿಂದ ನಿಂತವರ ಮ್ಯಾಲೆ ಗುಂಡು ಹಾರಿಸೋದೊಂದಗೊತ್ತು ನಮ್ಮ ಪೋಲೀಸರಿಗೆ·

ಹೆಂಡತಿ:— (ಇದುವರೆಗೆ ಒಬ್ಬೊಬ್ಬರನ್ನು ಮಿಕಿ ಮಿಕಿ ನೋಡುತ್ತ, ನಿಂತಿದ್ದು ತರುಣನಿಗೆ) ಪಾಪ· ಏನಾಗಿರಬೇಕು ಜನರ ಅವಸ್ಥೆ ಅಂತೀನಿ·

ಮುಂದ ಜನರೇ ಪೋಲೀಸರನ್ನ [illegible]

ಅತ್ಯಾಚಾರ ಎಲ್ಲಿಂದ ಬಂತು?

ತರುಣ:— (ದ್ವೇಷದ ನಗೆಯಿಂದ) ಪೋಲೀಸರದೂ ಅದ ಅವರ್ದೇ ಅಂತಾರೆ, ಹ ಹ. ಕೇಳ್ತಾರೆ ಜನ?

ವ್ಯಕ್ತಿ:— (ಗಾಬರಿಯಿಂದ ದನಿಯಿಂದ) ಅಂದ್ರೆ? ಏನು? ಏನ್ಮಾಡಿದರು?

ತರುಣ:— (ನಗುತ್ತಾ) ಚನ್ನಾಗಿ ಥಳಿಸಿದರು ಒಬ್ಬ ಪೋಲೀಸಿನವನಂತೂ ಪ್ರಾಣ ಕಳಕೊಂಡು ಬಿಟ್ಟರು. ಬಿಲೆ ಬಿದ್ದಿಯೊಳಗ ಒಡ್ಯೋ. ಪೋಲೀಸಿನವನನ್ನು ನೋಡಿದ ಕೂಡಲೇ "ಇವನು ನಮ್ಮ ಹಾಗೇ ಇದ್ದಾನ ಅಂತ ತಿಳಿಸಿ ಜನರು ಯಾವ ಹೆದರಿಕೆಯೋ ಇಲ್ದ ನುಗ್ಗಿದರು. ಅವರ ಮೈಮೇಲೆ ಅವರ ಲಾಠಿಕಸಕೊಂಡು ಅವರ್ನೆ ಥಳಿಸಿದರು. ಜೀವ ಸಮ್ಮರು—(ಒಮ್ಮೆಲೆ ಆಚೆ ಅತ್ತಿತ್ತ ನೋಡುವನು "ಬಂದೂಕಿನ ಸಿಪಾಯಿ ಬಂದರು, ಅಡಗಿಕೊಳ್ಳಿ, ಓಡಿ ಎಂಬ ಕೂಗು ದೂರದಿಂದ ಕೇಳಿಬರುತ್ತದೆ) ಯಾರಾದ್ರೂ ಕೂಗಿದ್ದು ಕೇಳಿಸಿತೇನು? (ಬಿಕ್ಕ ಇಬ್ಬರೂ : ಇಲ್ಲ" ಎಂಬಂತೆ ತಲೆಯಲ್ಲಾಡಿಸುವರು) ——

ವ್ಯಕ್ತಿ:— (ವಿಸ್ಮಯನನ್ನು ಹಿಡಿದುಕೊಂಡವನಂತೆ) ಹುಂ.....ಆಗ ಏನಾಯಿತು. ಜನರು ಮುಂದೆ ಗಲಭೆ ಮಾಡಿದರು. ಆ ಮ್ಯಾಲೆ ಪೋಲೀಸರು ಗುಂಡು ಹಾರಿಸಿದರು. ಹೌದಲ್ಲಾ?

ಹೆಂಡತಿ:— (ತರುಣನಿಗೆ) ಹೌದೇನೋ?

ವ್ಯಕ್ತಿ:— ಅದಕ್ಕೆ ಗಾಂಧೀಜಿ ಹೇಳಿದ್ದು "ಚಳುವಳಿ ಅಹಿಂಸಾತ್ಮಕ ಆಗಿರಬೇಕು" ಅಂತ ಅಂಥ ಬ್ರಿಟಿಷ ಸರಕಾರದ ವಿರುದ್ಧ ಅಹಿಂಸೆಯಿಂದ ಚಳುವಳಿ ನಡೆಸಿ——

ಒಂದನೇ ತರುಣ:— (ಕಠಿಣವಾಗಿ) ಬ್ರಿಟಿಷರಿಗೆ ಸಂಸ್ಕಾರ ಇತ್ತು.

ವ್ಯಕ್ತಿ:— (ಹಿತನದಿಂದ) ಅಂದ್ರೆ.... ಸ್ವತಂತ್ರ ಭಾರತದ ಸರಕಾರಕ್ಕೆ ಸಂಸ್ಕಾರ ಇಲ್ಲ ಅಂತೀಯೇನು?

ಒಂದನೇ ತರುಣ:— (ಗೊಣಗುತ್ತ) ಇದೆ. ಒಂದೇ ಸಂಸ್ಕಾರ ಶವಸಂಸ್ಕಾರ.

ಹೆಂಡತಿ:— ನಾವು ಏನಾದ್ರೊಂದು ಮಾತಾಡಬ್ಯಾಡ. ಸುದೈವದಿಂದ ಪಾರಾಗಿ ಬಂದೀಯಲ್ಲಾ? ಊಟಾ ಮಾಡು, ಮಲಗಿಕೊ ಮತ್ತು ಹೊರಗ ಹೋಗೋದ ಬ್ಯಾಡಾ. ಅದೇ ಧಾಂದಲೆ ಮುಗಿಯೋತನಕ.

ತರುಣ:— ನೀ ಈಗ ಊಟಾ ಹಾಕು, ಶಾಸ್ತ್ರದ ನೋಡ್ತೀನಿ ನಾ ಈಗ ಕಾಲೇಜಿಗೆ ಹೋಗಬೇಕು.

ವ್ಯಕ್ತಿ:— ಇವತ್ತು ಕಾಲೇಜು ಎಲ್ಲಿಂದ ಬಂತು? ಕೋರ್ಟ-ಕಚೇರಿ-ಶಾಲೆ-ಕಾಲೇಜು ಎಲ್ಲಕ್ಕೂ ರಜಾ ಘೋಷಿಸ್ಯಾರ.

ಹೆಂಡತಿ:— (ತರುಣನಿಗೆ) ಅವರು ಕೇಳಿಕೊಂಡು ಬಂದಾರ ಹೇಳ್ತಾರ.

ಒಂದನೇ ತರುಣ:— ನಮಗೆ ಸರಕಾರ ಕೊಟ್ಟಿರೋ ರಜೆ ಬೇಕಿಲ್ಲ. ಪೋಲೀಸರ ಅಮಾನುಷ ಅತ್ಯಾಚಾರ ಪ್ರತಿಭಟಿಸಿ ನಾವು ಆಫೀಸ್ನ ಅವಧಿಯ ವರೆಗೆ ಸ್ಟ್ರೈಕ ಮಾಡುತ್ತಿದ್ದೇವೆ ಅದಕ್ಕೆ ಬಿಡ್ರಿ ಹಂಗ.

ವ್ಯಕ್ತಿ:— ಇವತ್ತು ಕಾಲೇಜು! (ತನ್ನ ಮುಂದಿನ ಮಾತಿನ ತರುವಾಯ ಬಲದಿಂದ ದಿಟ್ಟಿಸಿನೋಡುತ್ತಿರಿಸಿ ಕೊಳ್ಳುತ್ತಿದ್ದ ಆಗ ಅವನನ್ನು ಉತ್ತೇಜಿಸುವಂತೆ ಹೆಗಲ ಮೇಲೆ ಥಟಿಸುತ್ತ)

ಮುಂದೆ ಜನರೇ ಪೋಲೀಸರನ್ನ ಹೊಡೆದರು ಅಂತ ನೀನೇ ಹೇಳಿದಿ. ಆಮ್ಯಾಲ ಗುಂಡುಹಾರಿಸಿದರ ಅತ್ಯಾಚಾರ ಎಲ್ಲಿಂದ ಬಂತು?

ಒಂದನೇ ತರುಣ :— (ಸಿಟ್ಟಿನಿಂದ) ಮುಂದೆ ಜನ ಯಾಕೆ ಹುಟ್ಟಿಗೆದ್ದರು ಗೊತ್ತೇ ನಿಮಗೆ? ಪಾಪ. ಯಾವನೋ ಒಬ್ಬ ಮುದುಕ ತನಗೂ ಆತ್ಮದರ್ಶನ ಮಾಡಿಕೊಳ್ಳಬೇಕು ಅಂತ ಸಾರಿದನಂತೆ ಅಂತಾಗ ಯಾವನೋ. ಪೋಲೀಸಿನ ಬಂದು ಅವನನ್ನು ಹೊಡೆದೋಡಿಸಿ ಬಿಟ್ಟಿದ ಅಂತ, ಆ ಮುದುಕನ ಮ್ಯಾಲೆ ಲಾಠಿ ಏಟ್ಟಿದ ಅಂತ. ಯಾಕೆ ಸಿಟ್ಟಿಗೆ ಬರಬಾರದು ಜನ?

ಹೆಂಡತಿ :— (ವ್ಯಕ್ತಿಗೆ) ಕಾಣೇನು? ನೀವೂ ಅಲ್ಲಿ ಇದ್ದಿರಲ್ಲ? ... ಇದಾದ್ರೂ, ಅಭ್ಯಾಸವಾ—

ವ್ಯಕ್ತಿ :— (ಅವನನ್ನುದ್ದೇಶಿಸಿದಂತೆ) ಶುದ್ಧ ಸುಳ್ಳು. (ಎಂದು ತಿರುಗಿ "ಶುದ್ಧ ಸುಳ್ಳು" ಎಂದು ದನಿಯನ್ನು ಇಳಿಸುತ್ತಾ ಒಳಗೆ ನಡೆದಾಗ ಅವನಿಗೆ ದೂರದಿಂದ "ಎಲ್ಲಿ ಬಿದ್ದೀರಿ ಯಾಕೆ ಸಿಟ್ಟಾಯಿತು ಸಾಹೇಬ್ರೇ? ಏಕೆ ತಲೆ ಬಿಸಿಯೇರಿತೇನು?" ಎಂದು ತನ್ನ ದನಿಯೆ ಕೇಳಿಸಿದಂತಾಗಿ— ಒಮ್ಮೆಲೆ ತಿರುಗಿ ನಿಂತು—ಅತ್ಯಂತ ಸಿಟ್ಟಿನಿಂದ)

ಶುದ್ಧ ಸುಳ್ಳು ಅಂತೀನಿ. (ಎಂದು ಒಳಗೆ ಹೋಗುವನು)

ಹೆಂಡತಿ :— (ಹೊರಗೆ) ಯಾವ ಮೀಟಿಂಗೋ? ನೀ ಹೋಗದಿದ್ದರೆ ನಡೆಸಿಕೊಡುತ್ತಿರಲಿಲ್ಲವೇನು?

ಒಂದನೇ ತರುಣ :— ನಮ್ಮ ವಿದ್ಯಾರ್ಥಿ ಸಂಘದ ಕ್ರಿಯಾ ಸಮಿತಿ ಮೀಟಿಂಗು. ನಾನೂ ಹೋಗಲೇಬೇಕು.

ವ್ಯಕ್ತಿ :— (ತಿರುಗಿ ನಿಂತು) ನಿಂ ಕ್ರಿಯಾ ಸಮಾಗೋಷ್ಠಿನೋ. (ಒಳಗೆ ಹೋಗುವನು)

ಒಂದನೇ ತರುಣ :— (ಆವೇಶದ ದನಿಯಲ್ಲಿ) ನಂ ಕ್ರಿಯಾ ಅಲ್ಲ. ಇದು ದಬ್ಬಾಳಿಕೆಯ ಉತ್ತರ ಕ್ರಿಯಾ ಸಮಿತಿ.

(ವ್ಯಕ್ತಿ ಅವಕ್ಕಾಗಿ, ಹೆಂಡತಿ ಮಾತಿನ ಅರ್ಥ ತಿಳಿಯದಂತಾಗಿ ತರುಣನನ್ನು ನೋಡಿದಾಗ)

(ಕತ್ತಲೆ)

(ಬೆಳಕು ಬಂದಾಗ ರಂಗದ ಮಧ್ಯದಲ್ಲಿ ಒಂದು ಹಾಸಿದ ಹಸೆ ಜಮಖಾನೆ. ಅದರ ಮೇಲೆ ಪ್ರೇಕ್ಷಕರನ್ನು ಎದುರಿಸಿ ಬಂದು, ಅದರ ಎಡ—ಬಲ ಬದಿಗಳಿಗೆ ಒಂದೊಂದು ದಿಂಬುಗಳಿವೆ. ಪ್ರಮುಖ ಇದಿರಾಗಿ ವಿದ್ಯಾರ್ಥಿನಾಯಕನು ಕುಳಿತಿದ್ದಾನೆ. ಅವನ ಬಲಬದಿಗೆ ಇನ್ನೊಬ್ಬ ತರುಣ, ಅವನ ಪಕ್ಕಕ್ಕೆ ಯುವಕ ಶ್ರಮಜೀವಿ ವಿದ್ಯಾರ್ಥಿ ನಾಯಕನ ಎಡಬದಿಗೆ ಒಬ್ಬ ಧಾರ್ಮಿಕ ತರುಣ ಕುಳಿತಿದ್ದಾನೆ. ಈ ನಾಲ್ವರೂ ಪ್ರೇಕ್ಷಕರ ಮುಂತುದಿಯಲ್ಲಿ ಅತ್ತಿಂದಿತ್ತ ಶತಪಥ ಹಾಕುತ್ತಿರುವ ಒಂದನೇ ತರುಣನನ್ನು ಚಿಂತಾತುರ ದೃಷ್ಟಿಯಿಂದ ನೋಡುತ್ತಿದ್ದಾರೆ. ನಿಮಿಷಗಳ ಬಳಿಕ ಒಂದನೇ ತರುಣ ಪ್ರೇಕ್ಷಕರ ಬದಿಯಲ್ಲಿದ್ದಾಗ ಒಮ್ಮೆಲೆ ತಿರುಗಿ ನಿಂತು ಈ ನಾಲ್ವರನ್ನೂ ನೋಡುತ್ತಾನೆ. ಒಂದನೇ ತರುಣ ಮಾತಿಲ್ಲದೇ ತಲೆಯಲ್ಲಾಡಿಸಿ, ಯಾವುದೋ ವಿಚಾರ ತನಗೆ ಒಪ್ಪದು ಎಂದು ಸೂಚಿಸಿ, ಹೊರಟ—)

ಒಂದನೇ ತರುಣ :— ನನ್ಗಂತೂ ಬಿಟ್ಟಿ, ಥೂ ಅನಿಸ್ತದ, ನನ್ನ ಸ್ವಾಭಿಮಾನ ಸಾವು ಅಂತ.

ವಿದ್ಯಾರ್ಥಿ ನಾಯಕ :— (ಮುಗುಳ್ನಗೆಯಿಂದ) ನನಗೂ ಹಾಗೇ ಅನ್ನಿಸ್ತಿತ್ತು, ಒಮ್ಮೊಮ್ಮೆ ಸಿಟ್ಟು ಬಂದಾಗ, ಹತಾಶ ಆದಾಗ, ಆದರೆ ಭವಿಷ್ಯ ನಮ್ಮದು, ತರುಣರದು ಅಂತ ಹೇಳಿದಾಗ ಅವರ ಶಾಂತರೀತಿ—ವಿಚಾರ ಮಾಡಿದಾಗ ಅದು ತಪ್ಪು ಅನ್ನಿಸ್ತಿತ್ತು. ಈ ಬೆಂಗ್ಳ ನಡೆದು ಬಂದರ ಮ್ಯಾಲೆ ನಾನ ಮಾಡಿದ್ದು ಇಲ್ಲ. ದೀರ್ಘಾವಧಿಯ ದೃಷ್ಟಿಯಿಂದ

೧. ತರುಣ :— (ನಗುತ್ತ) ನೀನು ಮಾತಾಡೋರೀತಿ ನೋಡಿದರೆ ನಿನಗೆ ಬುದ್ಧಿಬಂದಾಂಗೆ ತಿಳಿಯದಂತಾಯಿತು

ಆಗಿವೆ, ಅಂತ ಅನ್ಸುತ್ತದೆ.

ಒಂದನೇ ತರುಣ:— (ಅಪೇಕ್ಷೆಯಿಂದ ಚಪ್ಪಾಳೆ ತಟ್ಟಿ) ಕರೆಕ್ಟ್? (ಮತ್ತೆ ಇಬ್ಬರೂ ನಗುವರು)

ಬಿ. ನಾರಾಯಣ:— (ತುಸು ಕನಲಿ) ಅಂದ್ರೆ? ತರುಣ ಅನ್ನೋ ಮಾತ್ರಕ್ಕೆ ಸುಮ್ಮ ಸುಮ್ನೆ ಹಿಂಸಾತ್ಮಕ ಕೃತ್ಯಗಳಲ್ಲಿ ತೊಡಗಬೇಕೇನು?

ಒಂದನೇ ತರುಣ:— ಸುಮ್ಮ ಸುಮ್ನೆ ಎಲ್ಲಿದೆ? ಈ ಯೌವನಕ್ಕೆ ನಮಗೆ ಸ್ವಾತಂತ್ರ್ಯ ಬಂದ ಮೇಲೆ. ಜನರ ಯಾವ ಬೇಡಿಕೆ ಶಾಂತ ರೀತಿಯಿಂದಲೇ ಸರಕಾರ ಒಪ್ಪಿದೆ? ಅದ್ರೆ ಒಮ್ಮೆ ಜನರು ದಂಗೆ ಎದ್ದು ಸುಡೋದು ಕೊಲೆ ಮಾಡಿದರೂ ಆಗ ತಕ್ಷಣವೇ ಒಪ್ಪಿಸುತ್ತೆ ಸರಕಾರ. ಅದಕ್ಕೆ ಹೀಗೆ ಹಿಂಸಾತ್ಮಕತೆ ಮಾಡಬೇಕು. ಅಂತ ನನಗೆ ಅನ್ನಿಸೋದಿಲ್ಲ ಆದರೆ ನಮ್ಮ ಸರಕಾರವೇ ಆ ದಾರಿ ನಮ್ಮನ್ನು ತಪ್ಪಿಸುತ್ತದೆ.

ಯು. ಶ್ರಮಜೀವಿ:— ಹಿಂಸೆ. ಹಿಂಸೆ. ನಾ ಎಂದಿಗೂ ಅದೇ ಮಾತನ್ನಾಡುತ್ತೇನೆ. ಸರಕಾರ. ಜನತೆಯದು ಅನ್ನೋದು ಹೇಗೆ. ಅನ್ನೋದು ತಾನು ಬಡವರಿಗಳು ಗುಂಡು.

ಇನ್ನೊಬ್ಬ ತರುಣ:— ಹೌದು. ನೀ [illegible] ? [illegible]
[illegible]
[illegible]

ಮೂರನೇ ತರುಣ:— [illegible]. [illegible]
[illegible]
ಹೌದೆ? ತಾನು, ತನ್ನ [illegible], [illegible].

ಯು. ಶ್ರಮಜೀವಿ:— ಏ! ನೀ ಬಾಯ್ಮುಚ್ಚು! Capitalist ಹೌದು!
[illegible] parasite ನೀನು!

ಬಿ. ನಾರಾಯಣ:— [ಚಿಂತಿತನಾಗಿ] ಹೌದು, ಎಲ್ಲರೂ [illegible]
[illegible] ಹೌದೆ [illegible]
[illegible].

ಮೂ. ತರುಣ:— (ನಿಟ್ಟುಸಿರು) ಅದೇನಿಲ್ಲ. ಹಿಂಸಾತ್ಮಕ ಚಳವಳಿಯನ್ನು ನಡೆಸಬೇಕು ಅನ್ನೋದರ ನಿಮ್ಮ ಅಭಿಪ್ರಾಯ ಏನು?

ಯು. ಶ್ರಮಜೀವಿ:— ನನಗೊತ್ತಿದೆ ನಿನ್ನ ಹಿಂಸಾತ್ಮಕ ಚಳವಳಿ. ಅಪ್ಪನ ಅಂಗಡಿ ವ್ಯಾಪಾರ ಬೇಕಿಲ್ಲ ಅಂತ ಬಿಟ್ಟವರ ಅಂಗಡಿ ಸುಡೋದು.

ಇನ್ನೊಬ್ಬ ತರುಣ:— ಸರಿಯಾಗಿ ಹೇಳಿದ್ರಿ. ನಮ್ಮ ನಾರಾಯಣ ಹೇಳೋ ಹಾಗೆ ನಾವು ಮನುಷ್ಯತ್ವ ಬಿಡಬಾರದು.

ಒಂದನೇ ತರುಣ:— ನಾನು ಯಾವಾಗಲೂ ಸುಮ್ಮನಿರುವುದಿಲ್ಲ ಮನುಷ್ಯತ್ವ ವಿಷಯದ ಬಗ್ಗೆಯೇ. ಇಂದಿನ ತನಕ ನಮ್ಮ ಸರಕಾರಗಳು ನಡೆದುಕೊಂಡ ರೀತಿಯನ್ನು ನೋಡಿದರೆ ಹಿಂಸಾತ್ಮಕ ಚಳವಳಿಯನ್ನು ಬಿಟ್ಟು ಬೇರೆ ದಾರಿ ಸರಕಾರ ನಮ್ಮನ್ನ ಕೇಳೋದಿಲ್ಲ.

<u>ವಿ. ನಾಯಕ:—</u> (ಆ ಮಾತನ್ನು ಮುಗಿಸಿ ಬಂದಿರುವವನಂತೆ) ನೀನು ಹೇಳೋದು ಹಿಂದಿನ ಕತೆ. ಆಗ ಸರ್ಕಾರದವರಿಗೆ ಇನ್ನೂ ಅನುಭವಾನೂ ಇರಲಿಲ್ಲ, ಇತ್ತ ಅಭ್ಯಾಸಾನೂ ಇರಲಿಲ್ಲ. ಈಗೇನು ಈಗಿನ ಮಾತು ಬ್ಯಾರೆ.

<u>ಒಂದನೇ ತರುಣ:—</u> (ಮುಂದೆ ನಡೆದು ಬರುತ್ತ) ಈಗೇನಬುದ್ಧಿ ಬಂದಿದೆ ಏನಾ ಅದಕ್ಕೆ? (ಎರಡು ಧನಿಕ ತರುಣರ ಎದುರಿಗೆ ಕುಳಿತುಕೊಳ್ಳುವನು)

<u>ವಿ. ನಾಯಕ:—</u> (ತಿಳುಹಿಸಿ ಹೇಳುವ ಹುರುಪಿಂದ) ಬಂದಿ ಬರಿದಲ್ಲ. ಬಲ ಬಂದಿದೆ ಬಲ, ಪೋಲೀಸ ಬಲ, ಸೈನ್ಯ ಬಲಾ —ಶಸ್ತ್ರಾಸ್ತ್ರ—ಎಲ್ಲಾ ಬೆಳದಿದೆ. ಅಹಿಂಸೆಯು ಎದುರು ನಿಲ್ಲುತ್ತಲ್ಲೇ ನೀನು?

<u>ಇ. ತರುಣ:—</u> ಅದೇನ ಸುಳ್ಳಲ್ಲ, ಬ್ರಿಟಿಷರಿಗೆ ಅಂಥ ಒಂದು ಬಲ ಇತ್ತು. ನಾವು ನಿಶಸ್ತ್ರರಿದ್ದಿವಿ. ಅಂತಲೇ ಗಾಂಧೀಜಿಯವರು ಅಹಿಂಸಾತ್ಮಕ ಚಳುವಳಿ ಹೂಡಿದರು. ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟರು.

<u>ಒಂದನೇ ತರುಣ:—</u> (ಅತ್ಯಂತ ತಿರಸ್ಕಾರದಿಂದ) ಸಾಕ್ಬಿಡೋ ಆ ಗೊಡ್ಡು ಪುರಾಣವನ್ನು, ಕಾಗೆ ಕೂತಿತು ಕೊಂಬೆ ಮುರೀತು ಅನ್ನೋ ಕಾಕ ತಾಲೀಯ ನ್ಯಾಯ ಹೇಳಬ್ಯಾಡ. ಒಬ್ಬ ಹಿಟ್ಲರನ ಎದುರು ಆರು ವರ್ಷ ಯುದ್ಧ ಮಾಡಿ ದಣಿದಿದ್ದರು ಬ್ರಿಟಿಷರು. ಸಂಪತ್ತಿನ ಬದಲ ಸಾಲ ಬೆಳೆದಿತ್ತು. ಈ ದರಿದ್ರ ಸಾಮ್ರಾಜ್ಯದ ಭಾರ ಯಾಕೆ ಅಂತ ಕಳಚಿ ಬಿಸಾಡಿದರು. ನಮ್ಮನ್ನ ಅಹಿಂಸಾತ್ಮಕ ಚಳವಳಿ ಅಂತ ಹೇಡಿಗಳ ಪುರಾಣ ಹೇಳ್ತಾನೆ.

<u>ಇ. ತರುಣ:—</u> ಅಹಿಂಸೆಯಿಂದ ಹೋರಾಡೋದಕ್ಕೆ, ಧೈರ್ಯಬೇಕು ಧೈರ್ಯ, ಗುಂಡಿಗೆ ಎದೆಗೊಟ್ಟು ನಿಲ್ಲೋ ಧೈರ್ಯ ನೋಡಿದೆಯಲ್ಲಾ—ಬೆಳಗಾವಿ ನಡೆದದ್ದು? (ಅಣಕಿಸುತ್ತ) "ಒಂದುಸಾರಿ ಪೋಲೀಸರು ಬಂದರು ಓಡಿ, ಅಡಗಿರಿ, ಅಂತ ಕೂಗೋ ವೀರರನ್ನು?

<u>ಒಂದನೇ ತರುಣ:—</u> ಅದ್ರೆ, ಜನಪದ ಹೆದರಿದ ಇಲಿಯು ಹಾಂಗ ಓಡಿ ಬಿಲದೊಳಗ ಹುದುಗಲಿಲ್ಲ. ಸಂದುಗೊಂದುಗಳೊಳಗೆ ಸೇರಿದರು, ಮೋರಿಗೆ ಇಳಿದರು. ಕಲ್ಲು ತೂರಿದರು. (ತಿರಸ್ಕಾರದಿಂದ) ಗುಂಡಿಗೆ ಎದೆ ಕೊಡೋದು ಧೈರ್ಯ ಅಂತೆ. ಹುಚ್ಚನ. ಎದೆಗೆ ಏಟು ಬಿದ್ರೆ ಸಾಯೋದು ಖಂಡಿತ ಅನ್ನೋದನ್ನ ತಿಳಿಯದ ಹುಚ್ಚರು.

<u>ಧ. ತರುಣ:—</u> ಅದೇನ ಸುಳ್ಳಲ್ಲ. ಬೆನ್ನಿಗೆ ಏಟು ಬಿದ್ರೆ ಬದುಕೋ ಸಂಭವ ಅದ, ಬದುಕಿ ಮತ್ತ ಹೋರಾಡಲಿಕ್ಕೆ.

<u>ವಿ. ನಾಯಕ:—</u> ನನಗನ್ನಿಸ್ತದ, ನಾವು ಜನರ ಬಾಡಿ ಬಿಲ್ಡಿಂಗ ಕರೆದು ಪೋಲಿಗೆ ಹಾಕೋಣ, ಅಲ್ಲಿ ನಿರ್ಣಯ ಆದಾಂಗ ಮಾಡೋಣ.

<u>ಒಂದನೇ ತರುಣ:—</u> ನೀವು ಬೇಕಾದ್ದು ಮಾಡಿ, ಬೇಕಾದರೆ ನಿಮ್ಮ ಬಿಲ್ಡಿಂಗಿಗೆ ಮೊದಲು ಮುಹೂರ್ತ ತೆಗೆಸಿರಿ. ನಾ ಈಗಾಗಲೇ ಮಾತಾಡೀನಿ. ಭಾಳ ಜನ ನನ್ನ ಸೂಚನಾ ಒಪ್ಯಾರೆ. ನಾಳಿಂದ ನಮ್ಮ ಚಳವಳಿ ಸುರುವು. (ಹೋಗುವನು).

<u>ಯುವ. ಶ್ರಮಜೀವಿ:—</u> ಶ್ರಮಜೀವಿಗಳ ಯುವಕ ಸಂಘದ ವತಿಯಿಂದ ನಾಳಿಂದ ನಡೆಯೋ ಚಳವಳಿಕ್ಕೆ, ಬೆಂಬಲದ ಭರವಸೆ ಕೊಡ್ತೀನಿ (ಹೋಗುವನು)

ಧ· ತರುಣ:— ನಾನು ಬೆಂಬಲ ಕೊಡ್ತೀನಿ. ಒಂದು ಸಾವಿರ ರೂಪಾಯಿಗಳ ಸಹಾಯಧನ ಸಂಜೆಯೊಳಗ ನಿನ್ನ ಕೈಯಾಗ ಕೊಡ್ತೀನಿ.

(ಎಂದು ಎಡಕ್ಕೆ ಎಡಗೈಯಿಂದ ಒಂದನೇ ತರುಣನ ಬೆನ್ನನ್ನು ತಟ್ಟುವನು—ಇನ್ನೊಬ್ಬ ತರುಣ ಕುಳಿತಲ್ಲಿಯೆ ಇದ್ದಾನಯಷ್ಟೆ? ಎನ್ನುವ ದೃಷ್ಟಿಯಿಂದ ವಿದ್ಯಾರ್ಥಿ ನಾಯಕನನ್ನು ನೋಡುವಾಗ ನಾಯಕನು ಕಾತರ ದೃಷ್ಟಿಯಿಂದ ಎಡಕ್ಕೆ ನಿಂತು ಮೂವರನ್ನು ನೋಡುವನು. ಆ ಮೂವರು ಆಪ್ತಾಲೋಚನೆ ಮಾಡುವವರಂತೆ, ಒಬ್ಬರೊಬ್ಬರ ಕಿವಿಯಲ್ಲಿ ಮಾತಾಡುತ್ತ ಹೊರಡುವವರು. ನಾಯಕನು ಉಸಿರ್ಗರೆದು, ಇನ್ನೊಬ್ಬ ತರುಣನು ಆ ಮೂವ್ವರನ್ನು ನೋಡುತ್ತ ವಿಧಾನವಾಗಿ ಏಳುತ್ತಿರುವಾಗ——ಕತ್ತಲೆ)

(ಬೆಳಕಿನೊಡನೆ ಒಂದನೇ ತರುಣ ಧನಿಕ ತರುಣ, ಯುವಕ ಶ್ರಮಜೀವಿ (ಪ್ರೇಕ್ಷಕರ) ಎಡಬದಿಯಿಂದ ಬರುವರು. ಧನಿಕ ತರುಣನು ಅತ್ತಿತ್ತ ನೆಲದ ಮೇಲೆ ಏನನ್ನೋ ಹುಡುಕುವವನಂತೆ ಬಾಕ್ಕಿ, ಇಬ್ಬರ ಹಿಂದಿನಿಂದ ನಿಧಾನದ ಹೆಜ್ಜೆಗಳಿಂದ ನಡೆಯುತ್ತಿದ್ದಾನೆ. ಒಮ್ಮೆಲೆ ಒಂದೆಡೆ ಸಿಕ್ಕಿತೆಂಬಂದಾದ ಕಲ್ಲನ್ನು ಆಯ್ದು ಕೊಳ್ಳುತ್ತಾನೆ. ಅಷ್ಟರಲ್ಲಿ

ಒಂದನೇ ತರುಣ:— (ಹಿಂದಿರುಗಿ ನೋಡಿ) ಏನ್ಮಾಡ್ತಾ ಇದ್ದೀಯೋ? ಏನಾದ್ರೂ ಕಳೆದು ಕೊಂಡಿದ್ದೀಯೇನು?

ಧ· ತರುಣ:— (ಹುಬ್ಬನಗೆಯಿಂದ) ಏನ-ಏನ-ಏನಿಲ್ಲ. ಕ್ರಿಕೆಟ್ ಆಡಿದೆ ಭಾಳ ದಿನ ಆಯ್ತು, ಬೌಲಿಂಗ ಪ್ರ್ಯಾಕ್ಟೀಸ ಮಾಡೋಣ ಅಂತ.

ಯು· ಶ್ರಮಜೀವಿ:— (ತುಸು ತಿರಸ್ಕಾರ) ಒಂದು ಕಲ್ಲು ಆರಿಸಿಕೊಂಡೀ···ನನಗೊತ್ತು. ಆ ಎದುರಪ್ಪ ಸೆಟ್ಟಿ ನಿಮ್ಮವಿರೋಧಿ ಅಲ್ಲೇನು?

ಧ· ತರುಣ:— (ಏನೂ ಅರಿಯದವನಂತೆ) ಯಾವ ಸೆಟ್ಟಿ? ವಿದುರಪ್ಪ ಸೆಟ್ಟಿ? ಅದಕ್ಯಾವ ಸಂಬಂಧ?

ಯು· ಶ್ರಮಜೀವಿ:— (ಹಂಗಿಸುತ್ತ) ಯಾಕಂದ ಮರೆತ್ಬಿಟ್ಟೀ? ಅದ ಮೊನ್ನೆ ಮೊನ್ನೆ ಮನೆ ಕಟ್ಟಿಸ್ಯಾನ ನಿಮ್ಮಂಥ ದೊಡ್ಡಯ್ಯ ನೀವು ವೆರಂಡಾಕ. ಸಾದಾಗಾಜು ಹಚ್ಚಿದ. ಅದ ಒಂದೇ ದಿಕ್ಕಿನಿಂದ ಕಾಣೋ ಗಾಜು ಹಚ್ಚ್ಯಾನ. ನಿನಗ ಸಹನ ಇಲ್ಲ. ಅದಕ್ಕ ಕಲ್ಲು ಒಗೀಬೇಕು ಅಂತ——

ಒಂದನೇ ತರುಣ:— (ನಡುವೆಯೆ, ಧ ತರುಣನಿಗೆ) ಹಾದೇನು? ಎ ಇಲ್ಲದ್ದು ಹುಡುಗಾಟ ಬ್ಯಾಡ ವ್ಯವಸ್ಥಿತ ಚಳವಳಿ ಮಾಡ್ಬೇಕಾಗೇದ ನಮಗ ದೊಡ್ಡ ಪ್ರಮಾಣದಲ್ಲಿ. ಅದಕೇ ಅಲ್ಲೇನು ಈಗ ಮೀಟಿಂಗ ಕರೆದದ್ದು···ಈಗ ಇಂಥ ಹುಡುಗಾಟ ಬ್ಯಾಡ.

ಧ· ತರುಣ:— (ತನ್ನ ರಹಸ್ಯ ಹೊರಬಿದ್ದುದಕ್ಕೆ ಅವಮಾನಿತನಾಗಿ, ಸಿಟ್ಟಿನಿಂದ ಯು· ಶ್ರಮಜೀವಿಗೆ) ನಾನು ಕಲ್ಲು ಒಗೀತೀನಿ ಅಂತ ತಿಳಿ. ತಪ್ಪೇನು?

ಯು· ಶ್ರಮಜೀವಿ:— ತಪ್ಪು ಅಂದ್ರ? ನಮ್ಮೊಳಗನೇ ನೇರ ಕೊಡದಾವ್ರ, ಮೀಟಿಂಗ ಗೊತ್ತು ಮಾಡೋಕಾ-ಯ್ತು ಕ್ರಮ, ಮತ್ತು ಶಿಸ್ತು ಎರಡನ್ನೂ ಪಾಲಿಸೋದಿದ್ರೆ ನೇತಿಕೊ. (ಒಂದನೇ ತರುಣನನ್ನು ತೋರಿಸಿ) "ವ್ಯವಸ್ಥಿತ ಚಳವಳಿ" ಅಂತ ಇವ ಹೇಳಿದ್ದು ಅದಕ್ಕೇ. ಮುಲೀಬ್ಯಾಡ.

ಧ· ತರುಣ:— (ಸಿಟ್ಟಿನಿಂದಲೆ) ಬಳವಳಿ ವ್ಯವಸ್ಥಿತ ಅಂದ್ರೇನು? ಒಟ್ಟು ಅವ್ಯವಸ್ಥಾ ಬರಬೋದೆ ನಮ್ಮ ಉದ್ದೇಶ ಅಲ್ಲೇನು? ನಿನ್ನಂ ಇಷ್ಟು ಪಟ ಇದ್ದಂಗ ನೋಡು, ನಾನು—(ಬಗೆಯಲು ಕೈಯನ್ನ ತಟ್ಟುವಾಗ, ಒಮ್ಮೆಲೆ ಇದಿರಾ ನೋಡಿ ತಡೆದು) ಧ· ಪ್ಯಾಕ್ಟಿನೇ ಇಲ್ಲಧಾಂಗ ಆಗೇದ ನೋಡು· (ಮಿಕ್ಕ ಇಬ್ಬರೂ ಚಕಿತರಾಗಿ ಅವನನ್ನು ನೋಡುವಾಗ, ಅವನು ಇದಿರು ನೋಡುತ್ತಿರುವುದಕ್ಕೆ ತಾವೂ ಇದಿರು ನೋಡುವರು)· (ಇದಿರು ದಿಕ್ಕಿನಿಂದ ಮುಂದೆ ಗಲಾಟೆಯಲ್ಲಿ ಸಿಕ್ಕಿದ್ದ ಪೋಲೀಸ ಬರುತ್ತಾನೆ)

ಪೋಲೀಸ:— (ತನ್ನನ್ನು ನೋಡಿ ಮೂವರೂ ವಿಚಲರಾದುದಕ್ಕೆ ಸಂಶಯಗೊಂಡು) ಯಾರಾರು ನೀವು? ಏನ್ಮಾಡ್ತಾ ಇದ್ದೀರಿ?

ಯುವ ಶ್ರಮಜೀವಿ:— ಏನ್ಮಾಡ್ಬೇಕನ್ನೋದ ವಿಚಾರ್ಸಿ ಮಾಡ್ತಾ ಇದ್ದೀವಿ·

ಪೋಲೀಸ:— ಮೂರು ಜನ ಏನೋ ಮಸಲತ್ ನಡೆಸೋವವರ ಹಾಂಗ·····

1ನೇ ತರುಣ:— ಅಯ್ಯಂ ಜನ ಒಂದೇ ಕಡೆ ಸೇರೋವರಿಗೆ ಕೇಳೋ ಅಧಿಕಾರ ಇಲ್ಲವಲ್ಲ ನಿಮಗೆ?

ಪೋಲೀಸ:— (ಕೊಂಕಿ-ಬಂತಾಗಿ) ಅದ್ರೆ—(ಧ· ತರುಣನನ್ನು ತೋರಿಸಿ) ಇವರು ಕೈಯಲ್ಲಿ ಏನೋ ಮುಚ್ಚಿಕೊಂಡಾರಲ್ಲ? ಇದರ್ಯಿಂದ ಇನ್ನೆಂಥಾ ಅಧಿಕಾರ ಬೇಕು?

ಧ· ತರುಣ:— (ಕೃತಕ ನಗೆಯನ್ನು ನಕ್ಕು) ಓ-ಇದನ್ನು ಅಂತೀರಾ? ಇದು ಕಲ್ಲು· (ಮುಷ್ಟಿಯನ್ನು ಬಿಚ್ಚಿ ಅದನ್ನ ಕೆಳಗೆ ಬಿಸುಡುವನು· ಪೋಲೀಸನು ದರ್ಪದಿಂದ, ಸಂಶಯದಿಂದ ನೋಡಲು) ಕ್ರಿಕೆಟ ಬೌಲಿಂಗ ಪ್ರ್ಯಾಕ್ಟೀಸ ಮಾಡ್ತಿದೆ·····ಹ ಹ ಹ·

ಯು· ಶ್ರಮಜೀವಿ:— ಅವರು ತಮ್ಮ ಕಾಲೇಜಿನ ಟೀಮಿನೊಳಗ ಓಪನಿಂಗ ಬೌಲರ· (ಮೂವರೂ ತಂತಮ್ಮನ್ನು ಮುಗುಳ್ನಗೆಯಿಂದ ನೋಡುವರು)

ಪೋಲೀಸ:— (ಒಂದು ಕ್ಷಣ ಒಬ್ಬೊಬ್ಬರನ್ನೇ ದಿಟ್ಟಿಸಿ, ಸಂಶಯ ಬಂದಂತಾಗಿ) ಹಾಗಿದ್ದರೆ ತಯಾರ್ಯಾರಾಗಿರಿ· ನಾನೂ (ಲಾಠಿಯನ್ನು ತೋರಿಸುತ್ತ) ನಂ ಟೀಮಿನ ಓಪನಿಂಗ ಬ್ಯಾಟ್ಸಮನ್ (ಎಂದು ಅದನ್ನು ಝಳಪಿಸುವನು· 1ನೇ ತರುಣ ನಗಲು, ಅವನಿಗೆ—) ನೀವ—

1ನೇ ತರುಣ:— (ನಡುವೆಯೆ, ಕಾಲಿನಿಂದ ಸನ್ನೆಸುತ್ತ) ನಾನು ಫಾಸ್ಟ ಬಾಲ ಒಗೆಯುವ, ಜೋರಾಗಿ ಹಿಟ್ ಮಾಡಿದರೆ ಎದುರು ಬಂದವನ ಪ್ಯಾಂಟ ಕಳಚಿ—ಬೀಳೋದು·

ಪೋಲೀಸ:— (ಅಕಸ್ಮಾತ್ತಾಗಿ ಕನಲಿ) ನಾಲಿಗೆ ಹಿಡಿತದಲ್ಲಿರಲಿ· ಹೊರಟಿರಿ ಇಲ್ಲಿಂದ· ಒಂದು ಕಡೆ ಗುಂಪು ಕಟ್ಟಿಕೊಂಡು ನಿಲ್ಲಬ್ಯಾಡಿರಿ· (1ನೇ ತರುಣನಿಗೆ) ನೀ ಯಾರು ಅನ್ನೋದು ಗೊತ್ತೈತಿ ನನಗೆ· ಇನ್ನೊಮ್ಮೆ ನೀವಿಲ್ಲಿ ನಿಂತಿದ್ದನ್ನ ನೋಡಿದೆ ಅಂದರೆ— (ಒಮ್ಮೆಲೆ ಅಪಾರವಾದಂತಾಗಿ) ಎಚ್ಚರಿಕೆ· ಅಂದೆ (ಹೋಗುವನು) ಮೂವರೂ ಅವನು ಹೋಗುವುದನ್ನು ಮೌನದಿಂದ ನೋಡಿ, ಅವನು ಮರೆಯಾದ ಮೇಲೆ ಒಬ್ಬರೊಬ್ಬರ ಕೈ ಮೇಲೆ ಕೈಯನ್ನು ಚಪ್ಪರಿಸಿ ಗಟ್ಟಿಯಾಗಿ ನಗುವರು)·

ಧ· ತರುಣ:— (1ನೇ ತರುಣನಿಗೆ) ನಿನ್ನ ಗುರುತು ಹಿಡಿದ್ಹಾಂಗ ಕಾಣ್ತದ·

ಯು· ಶ್ರಮಜೀವಿ:— (1ನೇ ತರುಣನಿಗೆ) ಇವನೇ ಏನ ನಿನ್ನ ಹೇಳಿದವ, ಪ್ಯಾಂಟ ಕಳೆಸಿಕೊಂಡು ಬಿಟ್ಟ ಅಂತ· (1ನೇ ತರುಣ ಮುಗುಳ್ನಗೆಯಿಂದ ತಲೆದೂಗುವಾಗ ಮಿಕ್ಕ ಇಬ್ಬರೂ ನಗುವರು·

ಒಂದು ಕ್ಷಣ ಉಸಿರಾಡಿಸಿಕೊಳ್ಳುತ್ತಿರುವಂತೆ ಮೌನ·)

<u>೨· ತರುಣ:—</u> (ಬೇಸರದ ಧ್ವನಿಯಲ್ಲಿ) ಛೆ· ಊರ ತುಂಬ ಈ ಹಾಳು ಪೋಲೀಸರದೆ ಹಾವಳಿ· (ಒಮ್ಮೆಲೆ ಏನೋ ಹೊಳೆದವ ಉತ್ಸಾಹಿತನಾಗಿ) ಏ— ಊರ ಹೊರಗ ಹೊಲಗೋಳಾ ನಡೀರಿ· ಅಲ್ಲಿ ಒಂದು 30-40 ಗುಡಿಸಲು ಇವೆ· ಅವಕ್ಕೆ ಬೆಂಕಿ ಹಚ್ಚೋಣು· ಎಲ್ಲಾ ಪೋಲೀಸರು ಆ ಕಡೆ ಧಾವಿಸ್ತಾರ, ಆ ಮ್ಯಾಲೆ ನಾವು ಊರಗೋಳಾಗ—

<u>ರಾಮು· ಶ್ರಮದೇವಿ:—</u> (ಒಮ್ಮೆಲೆ ಕನಲಿ) ನಾಚಿಕೆ ಆಗ್ಬೇಕು ನಾಚಿಕೆ ನಿನಗೆ· ಊರ ಹೊರಗಿನ ಗುಡಿಸಲು ಸುಡ್ತಾನಂತ· ಪಾ ಪ· ನಿಮ್ಮಂತವರ ಶೋಷಣೆಯಿಂದ ಹಣ್ಣಾದ ನಿಮ್ಮವರ್ಗದ ಆ ಜನರು, ಅವರೇನ್ಮಾಡ್ಯಾರ ನಿನಗೆ?

<u>೨· ತರುಣ:—</u> ನಿಮ್ಮವರ್ಗದ ಜನ· ಎಲ್ಲಿಂದ ತಂದೆ ಈ 'ನಿಮ್ಮ' ವರ್ಗವನ್ನ? ಪಾಟೀಲರ ಸವರ್ಣಜವಾದ ಶ್ರಮದೇವಿಯಾದ ನಿನಗ ಈ ವರ್ಗ ಎಲ್ಲಿಂದ ಸಿಕ್ಕಿತು?

<u>1ನೇ ತರುಣ:—</u> (ಒಮ್ಮೆಲೆ ಸಿಟ್ಟಿನಿಂದ) ಏ, ಸಾಕ್ಮಾಡಿಗೋ, ನಿಮ್ಮಿಬ್ಬರ ಹೊಡೆದಾಟವನ್ನ· ನಮ್ಮ ನಾಯಕ ಹೇಳೋದೇನು ಸುಳ್ಳಲ್ಲ· ಒಂದು ವಿಶಾಲ ಏಕತ್ವದ ಅಗಿ ಮಾಡ್ಲಿಕ್ಕೆ ಬರೋ— ದಿಲ್ಲವಲ್ಲ ನಿಮಗೆ? ಮಣಿಗೆ ಬಿದ್ದು ಕಾದರೆ ಅತ್ತ ಹಾವೇನೇ ಹಿಡಿಯೋದು· ಬಾಯ್ಮುಚ್ಚಿಕೊಂಡು ನಾ ಹೇಳಿದ ಹಾಂಗ ಮಾಡ್ತಿದ್ದರ ಬರ್ರಿ· ಇಲ್ಲ ಯಾರ ಸಹಾಯನೂ ಬ್ಯಾಡ ನನಗ· (ರಭಸದ ಹೆಜ್ಜೆಗಳಿಂದ ಹೋಗುವನು· ಮಿಕ್ಕ ಇಬ್ಬರೂ ತಂತಮ್ಮನ್ನು ದಿಟ್ಟಿಸುತ್ತ ಕೈ ಹಿಸುಕುವರು· ನಿಧಾನದ ಹೆಜ್ಜೆಗಳಿಂದ ಅವನು ಹೋದತ್ತ ಹೊರಡುವರು)

<u>ರಾಮು· ಶ್ರಮದೇವಿ:—</u> (ವ್ಯಂಗ್ಯದ ಧ್ವನಿಯಲ್ಲಿ) ಅವ ಒಮ್ಮೆಲೆ ಹೀಂಗ್ಯಾಕ ಸಿಟ್ಟಿಗೆ ಬಂದ ಅನ್ನೋದು ತಿಳೀತೇನ್ನಿನಗ?

<u>೨· ತರುಣ:—</u> (ಅದೇ ಧ್ವನಿಯಲ್ಲಿ) ಅವನೂ ಹಿಡಕೊಂಡ ಹಾಂಗ ಕಾಣ್ತದ· (ಒಮ್ಮೆಲೆ ಇಬ್ಬರೂ ತಡೆದು ಇಬ್ಬರಾಗಿ ನಿಂತುಕೊಂಡು ನಾಟಕದಲ್ಲಿ ಪಾಠ ಮಾಡಿದ ಮಾತುಗಳಂತೆ—)

<u>ರಾಮು· ಶ್ರಮದೇವಿ:—</u> ಮಾತಾಡೋದು ಸುಲಭ, ತಮ್ಮಾ—

<u>೨· ತರುಣ:—</u> (ಅದೇ ಧ್ವನಿಯಲ್ಲಿ) ಅದ್ರ ಮಾಡೋದು ಕಠಿಣ· (ಎಂದು ಒಬ್ಬರೊಬ್ಬರ ಕೈಯನ್ನು ಬಲವಾಗಿ ತಟ್ಟಿ ನಗುತ್ತ ಹೊರಡುವಾಗ—ಕತ್ತಲೆ)

ಬೆಳಕು ಬಂದಾಗ ವ್ಯಕ್ತಿ—ಮನೆಯಲ್ಲಿ ಎಲ್ಲಿಯೂ ಹೋಗುವ ಅವಸರದಲ್ಲಿದ್ದಾನೆ·

<u>ವ್ಯಕ್ತಿ:—</u> (ಹೆಂಡತಿಗೆ) ಲಗೂ ಊಟಕ—ಕೊಡ್ತೀರೇ?

<u>ಹೆಂಡತಿ:—</u> (ಸಿಡುಕಿನ ಧ್ವನಿಯಲ್ಲಿ) ಅದನ್ನೆ ನಡೆಸೀನಿ· ತಿಂಗಳಾನು ತಿಂಗಳ—

<u>ವ್ಯಕ್ತಿ:—</u> (ಅಳಿಗೆ) ಏನ 'ತಿಂಗಳ' ಏನಂದಿ? (ಮತ್ತೆ ಅಚ್ಚರಿ, ಸುತ್ತಾಡುತ್ತ) ಈ ಹಾಳು ವಾಕಿಂಗ ಸ್ಟಿಕ ಎಲ್ಲಿ ಹೋಯಿತು, ನನ್ನದು?

<u>ಹೆಂಡತಿ:—</u> (ಗೊಣಗುವ ಧ್ವನಿಯಲ್ಲಿ) ತಿಂಗಳಾನು ತಿಂಗಳು ಮನೆ ಬಿಟ್ಟೇ ಹೊರಗೇ ಹೋಗೋದಿಲ್ಲ, ಇವರ ಕೆಲಸ, ಇವರ ಕೇಳೋರು ಯಾರಾಗ ಎಲ್ಲಿ ಇದ್ದಾರೋ—

(ಹೊರಗಿನಿಂದ "ರಾಯರ, ರಾಯರ, ರಾಯರು ಇದ್ದಾರೇನು?" ಎಂಬ ಕೂಗು)

<u>ವ್ಯಕ್ತಿ</u> :— (ಹೆಂಡತಿಗೆ) ನಾ ಅವಸರದ ಕೆಲಸದೊಳಗ ಇದ್ದೀನಿ ಅಂತ ಹೇಳು. (ಆಕೆ ತನ್ನನ್ನು ನೋಡದ ಇಲ್ಲಾ, ನಾ ಮನೀವಳಗೇ ಇಲ್ಲ ಅಂತ—

<u>ಹೆಂಡತಿ</u> :— ಬಾಗಿಲಾ ತೆರೆದಿಟ್ಟರೆ ನಾ ಹೇಳೋದರೊಳಗೇ—

<u>ವ್ಯಕ್ತಿ</u> :— (ಅವಸರ, ಸಿಟ್ಟು) ಹೋಗು, ಅಂತೀನಿ—(ಇಷ್ಟರಲ್ಲಿ "ರಾಯರ" ಎನ್ನುತ್ತ ವಿದ್ಯಾರ್ಥಿ ನಾಯಕ ಮತ್ತು ಇನ್ನೊಬ್ಬ ತರುಣ ಬರುವರು)

<u>ವಿ. ನಾಯಕ</u> :— (ವ್ಯಕ್ತಿಯನ್ನು ನೋಡಿ) ಹಂ, ಮನೀವಳಗೇ ಇದ್ದೀರಲ್ಲ, ನಿಮ್ಮನ್ನ ನೋಡೋ ಅವಸರದಿಂದ ಬಂದೀವಿ.

<u>ವ್ಯಕ್ತಿ</u> :— ಹಂ, ಕೋಟು ಸಿಕ್ಕೀತು.

(ಎಂದು ವಾಕಿಂಗ್ ಸ್ಟಿಕನ್ನು ಕೈಯಲ್ಲಿ ತೆಗೆದು ಕೊಳ್ಳುವನು. ಈಗ ಅವನಿಗೆ ಕೋಟ ಇಲ್ಲ, ತಲೆಯ ಮೇಲೆ ಟೊಪ್ಪಿಗೆ, ಶರ್ಟ್ ಬಟನ್ ಹಾಕಿಲ್ಲ. ಬಂದ ಇಬ್ಬರನ್ನು ನೋಡಿ—)

<u>ವ್ಯಕ್ತಿ</u> :— ಈಗ ನಾನು ಹೊರಗ ಹೋಗೋ ಅವಸರದೊಳಗ ಇದ್ದೀನಿ (ಎಂದು.ಪ್ರೇಕ್ಷಕರ ಎಡಬದಿಯ ವಿಂಗನತ್ತ ಬಂದು ಕಾಲ್ಗಳನ್ನು ಚಪ್ಪಲಿಗಳನ್ನು ಹಾಕಿಕೊಳ್ಳುತ್ತಿದ್ದಾನೆ.)

<u>ಇ. ತರುಣ</u> :— ನಾವು ಬಂದ ಕೆಲಸಾನೂ ಅಗತ್ಯದ್ದು, ನಿಮ್ಮ ಕೆಲ್ಸ.

<u>ಹೆಂಡತಿ</u> :— (ಮೆಲ್ಲಗೆ ವ್ಯಕ್ತಿಗೆ) ನಿಮ್ಮ ಕೆಲ್ಸ ಅಂತ ಧಾವಿಸಿ ಬಂದಾರ ಹುಡುಗರು ಕೇಳಿಕೊಳ್ಳಿ. ನಾ ಬಂದೆ (ಎಂದು ಒಳಗೆ ಹೋಗುವಳು)

<u>ವ್ಯಕ್ತಿ</u> :— (ನಿರುಪಾಯನಾಗಿ) ಏನದು? ತಟ್ಟನೆ ಹೇಳ್ತಿದ್ದರೆ ಕೇಳ್ತೀನಿ. (ಎನ್ನುತ್ತಾ ಅವರ ಕಡೆ ನಡೆದು ಬರುವನು. ತಾನು ಬಲಗಾಲಲ್ಲಿ ಮಾತ್ರ ಚಪ್ಪಲಿಯನ್ನು ಮೆಟ್ಟಿದ್ದೇನೆ ಎಂಬುದರ ಲಕ್ಷ್ಯ ಅವನಿಗಿಲ್ಲ)

<u>ವಿ. ನಾಯಕ</u> :— ನಿಮ್ಮಿಂದ ಆಗಿಲ್ಲಲ್ಲ, ನಂ ಮಗ ನಿಂ ಮಾತು ಕೇಳಬಹುದು—

<u>ವ್ಯಕ್ತಿ</u> :— (ನಡುವೆಯೆ) ಕೇಳರಿ, ಹಿಡಿ, ಯಾವ ಮಾತು? ಅದನ್ನ ಮೊದಲು ಹೇಳಿರಿ.... ಹಂ.... ಮತ್ತೆ ನೀವು ಯಾರು? ನಿಮಗೂ ಅವನಿಗೂ ಏನ್ ಸಂಬಂಧ—

<u>ಇ. ತರುಣ</u> :— ಇವರು ವಿದ್ಯಾರ್ಥಿ ಸಂಘದ ನಾಯಕರು. ನಿಂ ಹುಡುಗ ನಂ ಸಂಘದಲ್ಲೆ—

<u>ವ್ಯಕ್ತಿ</u> :— (ನಡುವೆಯೆ) ಅದು ನನಗೊತ್ತಿದೆ. (ಸಂಶಯದ ದನಿಯಲ್ಲಿ, ಅವರನ್ನು ದಿಟ್ಟಿಸುತ್ತಾ) ಅವ ಹೇಳಿದ ನಿಮ್ಮ ಸಂಘ ಇಂದು ನಾಳೆ ಚಳವಳಿ ಹೂಡೋದಿದೆ ಅಂತ, ಅದರೆ ನೀವು ಅವನ್ನ ಹುಡುಕುತ್ತಾ ಬಂದೀರಿ?

<u>ಇ. ತರುಣ</u> :— (ನಗುತ್ತ) ನಾವೇನು ಸಾದಾವೇಷದ ಪೋಲೀಸರೂ ಅಂತ ತಿಳಿದಿರೇನು? ... ಹ ಹ.

<u>ವಿ.ನಾಯಕ</u> :— (ಅವನನ್ನು ಕೈಸನ್ನೆಯಿಂದ ತಡೆಯುತ್ತಾ, ವ್ಯಕ್ತಿಗೆ) ಅದೇನೋ ನಿಜ, ಆದರೆ ಅದಕ್ಕೆ ಅವಸರ ಮಾಡ್ತಾರೂಂ, ಮೊದಲು ಸಮರ್ಪಕವಾಗಿ ವ್ಯವಸ್ಥಿತಗೊಳಿಸಬೇಕು—

<u>ವ್ಯಕ್ತಿ</u> :— (ಇನ್ನೂ ಸಂಶಯದಿ) ಎಂಥಾ ವ್ಯವಸ್ಥಾ? ಇದೇನ್ ಮೊದಲ ಸಲ ಅಲ್ಲ ನೀವು ಹೀಗ ಚಳವ—

ಪಿ. ನಾರಾಯಣ:— (ನಡುವೆಂತೆಲೆ) ಆ ಅನುಭವದಿಂದಲೇ ಈ ಸಲ ವ್ಯವಸಾಯಗೊಳಿಸುವ ವಿಚಾರ ಮಾಡ್ತಾ ಇದ್ದೀವಿ. ತಡೀರಿ— —ನಂ ಮಾತು ಕೇಳಿರಿ. ನಾವು ನೋಡ್ತೀವಿ— — ಕ್ರಮೇಣ ನಮ್ಮೊಳಗೆ ಪುಂಡರು ಬಂದು ಸೇರಿಕೊಂಡಾರೆ. ಕಲ್ಲು ಒಗೆಯುವವರೂ ಅವರೇ, ಬೆಂಕಿ ಹಚ್ಚುವವರೇ ಅವರು—

ಇ. ತರುಣ:— ಇದನ್ನ ತಿಳಿಯದೆ ನಾವು ಮುಂದೆ ಕಾಗದಾ ಮೆರವಣಿಗೆಯೊಳಗ ಹೋಗ್ತೀವಿ.

ವ್ಯಕ್ತಿ:— (ತಲೆ ಅಲ್ಲಾಡಿಸುತ್ತಾ) ನನಗ ತಿಳೀವಲ್ಲದು. ಅಲ್ಲ ಜನರ ನಿಮ್ಮಂ, ಪುಂಡರು ಯಾಕ ಸೇರ್ತಾರು—

ಪಿ. ನಾರಾಯಣ:— ಬ್ಯಾರೆ ಕೆಲಸ ಇಲ್ಲದಂಕ್ಕ ಸೇರ್ತಾರ. ಲೂಟಿ ಮಾಡೋ ಆಶೆಯಿಂದ ಸೇರ್ತಾರ. (ವ್ಯಕ್ತಿ ಇನ್ನೂ ನಂಬದವನಂತೆ ಕಾಣಲು) ಕೆಲವರನ್ನು ಅಧಿಕಾರಿಗಳೆ ನಮ್ಮೊಳಗೆ ಸೇರಿಕೊಳ್ಳೋದಕ್ಕ ಕಳಿಸ್ತಾರ.

ಇ. ತರುಣ:— ನಮ್ಮನ್ನ ಹೊಡೀಲಿಕ್ಕ ಛಾನ್ಸ ಸಿಕ್ಕಲಿ ಅಂತ.

ವ್ಯಕ್ತಿ:— ನಂ ಹುಡುಗನಿಗೆ ಗೊತ್ತಿಲ್ಲೇನು ಇದೆಲ್ಲ?

ಪಿ. ನಾರಾಯಣ:— ಗೊತ್ತಿದೆ (ಅಸ್ಪಷ್ಟ ಮಾತುಗಳಲ್ಲಿ) ಆದ್ರೆ ಅವನಿನ್ನೂ ಭಾವನಾತ್ಮಕ. ಏನಾ ಬೇಕಾದಾಂಗೆ, ಈಗಲೇ ಸುರುಮಾಡ್ಬೇಕು ಅಂತಾನ. ನಂ ಮಾತಿಗೆ ಅವನನ್ನ ನೀವು ಒಪ್ಪಿಸ್ಬೇಕು. ಅಂತ

ವ್ಯಕ್ತಿ:— (ಒಂದು ಕ್ಷಣ ಯೋಚಿಸಿ) ಈಗ ನಾನು ಎಲ್ಲಿಗೆ ಹೊರಟೀನಿ ಅಂತ ತಿಳಿದೀರಾ?

ಇಬ್ಬರೂ:— ಎಲ್ಲಿ?

ವ್ಯಕ್ತಿ:— ನನ್ನ ಹುಡುಗನ ಅಭಿಪ್ರಾಯ ನಾನೂ ಒಪ್ಪೇನಿ ಅಂತ ಅವನಿಗೆ ಹೇಳಲಿಕ್ಕ ಹೊರಟೀನಿ. (ಹೊರಡಲು ಹೆಜ್ಜೆ ಇಡುವಾಗ) ನೀವು ಬೇಕಾದ್ರೆ ಅವನ ಕೈ ಬಿಟ್ಟುಬಿಡಬಹುದು.

ಪಿ. ನಾರಾಯಣ:— (ಅವನನ್ನ ಅಡ್ಡಗಟ್ಟಿ) ತಡೀರಿ. ರಾಯರ. ನಾನು ಎಂದಿಗೂ ಅವನ ಕೈ ಬಿಡೋದಿಲ್ಲ. ಒಂದು ವ್ಯಾಳ್ಯಾ ನಂ ಮಾತನ್ನ ಒಪ್ಪದೆ ಅವನು ಚಳವಳಿ ಎಬ್ಬಿಸಿದರೆ ನಾವು ಅನಿವಾರ್ಯ ವಾಗಿ ಅದರಲ್ಲಿ ಸೇರಿಕೊಳ್ತೀವಿ. ಆದರೆ ನಾವೇಳಿಕೊಳ್ಳೋದೇನು ಅಂದರೆ ನಿನ್ನೆ ಯಾವುದೋ ಕ್ಷುಲ್ಲಕ ಕಾರಣಕೆ ಪುಂಡರು ಗಲಭೆ ಎಬ್ಬಿಸಿದರು. ಅನ್ನೋದಕ—

ವ್ಯಕ್ತಿ:— ಯಾವ ಕ್ಷುಲ್ಲಕ ಕಾರಣ?

ಇ. ತರುಣ:— ಯಾರೊಬ್ಬ ಪೋಲೀಸರು ನೂಕಿದರು, ಅವಮಾನ ಗೊಳಿಸಿದರು ಅಂತ ಸುದ್ದಿ ಹಬ್ಬಿಸಿ—

ವ್ಯಕ್ತಿ:— (ಸಿಟ್ಟಿನಿಂದ ನಿಂತು) ಅದು ಹಬ್ಬಿಸಿದ ಸುದ್ದಿ ಅಲ್ಲ. ನಡೆದ ಸಂಗತಿ. ನಾ ಎಲ್ಲಾ ತಿಳ್ಕೊಂಡು ಮಾತಾಡ್ತೀನಿ. ಆ ನೂಕಿಸಿಕೊಂಡವನ ನನ್ನ ಪರಿಚಯದವ, ಪಕ್ಕಾ ಜಂಟಲ್ಮನ್, ಮರ್ಯಾದವ, ಸರಕಾರಿ ನೌಕರಿಯೊಳಗ ಇದ್ದ ಎಲ್ಲಾ ಕಾಯಿದೆ ಬಲ್ಲವ.

ಪಿ. ನಾರಾಯಣ:— ನಿಂ. ಮಾತು ಒಪ್ಪಿಕೊಂಡೆ, ಆದರೆ— ಒಂದು ತಿಂಗಳೊಪ್ಪತ್ತು ತಡೆದು, ವಿಚಾರ ಮಾಡಿ, ಸಂಘಟನೆ ಮಾಡಿ—

ವ್ಯಕ್ತಿ:— (ನಡುವೆಂತೆಲೆ) ಅಂದೆ? ನೀವು ಮಾಡಿರಿ ಅದನ್ನ.

ಇ. ತರುಣ:- (ಚಕಿತನಾಗಿ) ಅಂದ್ರೆ?

ವಿ. ನಾಯಕ:- ಅಲ್ಲ. ನೀವೇನೊಬ್ಬರಾದ್ರೂ ಏನು?

ವ್ಯಕ್ತಿ:- (ಕ್ರುದ್ಧನಾಗಿ, ಆದರೆ ನಿಧಾನವಾಗಿ ಆವೇಶದಿಂದಲೇ ಏರುಧ್ವನಿ) ನೀವೇನ್ಮಾಡಿದ್ರಿ ಅಂದೆ. ನಿಜವಾಗಿ ನೀವು ನಾಚಿಕೆಪಡ್ಬೇಕು ಅಂತದ್ದು ಇದೆ, ವಿಚಾರ ಮಾಡಿರಿ, ಸಂಘಟನೆ ಮಾಡಿರಿ. ಇದರಿಂದ ಇಂದಿನ ಕಾಲದ ನೀವು ಒಳ್ಳೆಯದನ್ನೇ ನೋಡಿಯೇ ಇಲ್ಲ. ನಿಮ್ಮ ವಯಸ್ಸಿನಲ್ಲಿ ನಾ ನೋಡಿದೀನಿ; ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದೀನಿ, ದೇಶದ ಉಜ್ವಲ ಭವಿಷ್ಯದ ಬಗ್ಗೆ ಕನಸು ಕಟ್ಟಿಕೊಂಡಿದ್ದೆ. ಆ ಸಂಸ್ಕಾರಕ್ಕಾಗಿಯೇ ನಾನು ಇದುವರೆಗೂ ತಡೆದುಕೊಂಡಿದ್ದೆ. ಆ ಸಂಸ್ಕಾರಕ್ಕಾಗಿಯೇ ನಾನು ಇದುವರೆಗೂ ತಡೆದುಕೊಂಡೆ. ಇನ್ನು ಶಕ್ಯವಿಲ್ಲ.

ವಿ. ನಾಯಕ:- (ಚಕಿತನಾಗಿ) ನಿಮ್ಮಂಥಾ ಹಿರಿಯರು ಈ ಮಾತನ್ನ ಹೇಳ್ಬೇಕಂದ್ರೆ—

ವ್ಯಕ್ತಿ:- (ನಡುವೆಯೇ) ಯಾಕೆ ಹೇಳಬಾರದು? ನನ್ನ ಕನಸು ಒಡೆದು ಚೂರು ಚೂರಾಯ್ತು. ದೇಶ ಒಂದಾಗಲಿಲ್ಲ, ದೇಶ ಬಲಾಢ್ಯ ಆಗಲಿಲ್ಲ. ನಾವೆಲ್ಲಾ ಸುರಕ್ಷಿತವಾಗಿ ಸುಖವಾಗಿ ಜೀವನ ನಡೆಸೋದ ಎಲ್ಲಾ ಮಣ್ಣುಪಾಲಾಯ್ತು.

ಭಾಷೆ ಅಂದ್ರೆ ಭಾಷೆ, ಜಾತಿ ಅಂದ್ರೆ ಜಾತಿ, ಯಾವ ನಿಮಿತ್ತ ಆದ್ರೂ ನಾವು, ದಂಗೆ ಎಬ್ಬಿಸಲಿಕ್ಕೆ. ರಸ್ತೇಲಿ ಹೋಗುವಾಗ ಚೂರಿ ತೋರಿಸ್ತಾರೆ, ಕೈಯಲ್ಲಿ ದರೋಡೆ ಮಾಡ್ತಾರೆ, ಹೆಣ್ಣನ್ನ ನೋಡಿದರೆ ನಾಚಿಕೆ ಇಲ್ಲದೆ ಅಂಗಾತ ಮಲಗಿಸ್ತಾರೆ, ಅಧಿಕಾರಿಗಳು ಯಾರೂ, ರಾಜ್ಯ ನಡೆಸೋರ್ಯಾರು ಹಿಡಿಯೋದು ಕಷ್ಟ ಆಗಿದೆ, ನಿಮಗೆ ನಿಧಾನವಾಗಿ ಯೋಚನೆ ಮಾಡಿ ಪ್ಲಾನ್ ಹಾಕಲಿಕ್ಕೆ ದೇವರು ದೀರ್ಘಾಯುಷ್ಯ ಕೊಡಲಿ, ನನಗೆ ಉಳಿದದ್ದು ಅಲ್ಪ ಆಯುಷ್ಯ—(ಹೊರಡಬೇಕೆನ್ನುವಾಗ)

ವಿ. ನಾಯಕ:- (ಇಬ್ಬರೂ ಅವನನ್ನು ತಡೆಯುತ್ತಾ) ಛೇ. ಛೇ. ರಾಯರೇ. ಅದಕ್ಕೇ ಹೇಳ್ತೀವಿ. ನಮ್ಮನ್ನ ಹಣಿಯೋದರಲ್ಲಿ ಇರೋದರ ಬದಲು ನೀವೇ ಭಾವನಾವಶರಾದರೆ,

ವ್ಯಕ್ತಿ:- ನಿಮ್ಮಿಂದ ಬಂದದ್ದು ನನ್ನ ಮನಸಿಗೆ ಭಾವನಾತ್ಮಕತೆ.

ವಿ. ನಾಯಕ:- (ಅವನನ್ನು ಸಮಾಧಾನಿಸುತ್ತಾ) ಅದಲ್ಲ, ಈ ವಯಸ್ಸಿನೊಳಗೆ ನಿಮ್ಮ ಬುದ್ಧಿ ಯಾವುದ—(ವ್ಯಕ್ತಿ—ಅವನನ್ನು ದುರುಗುಟ್ಟಿ ನೋಡುತ್ತಾ ಹಿಡಿಯುತ್ತಾನೆ). (ಅವನಿಲ್ಲಿ ತಡೆದನೆಂದು ಭಾವಿಸಿ ಅವನಿಂದ ದೂರ ಸರಿಯುತ್ತಾನೆ)

ವ್ಯಕ್ತಿ:- ನಿನಗೆ ಸಮಾಧಾನ ಆಗ್ಬೇಕಂದ್ರೆ ಹೇಳ್ತೀನಿ——ಬುದ್ಧಿ ಒಪ್ಪುತ್ತೆ, ಆದರೆ ಸ್ವಾಭಿಮಾನದ ಹೃದಯ ಅದನ್ನ ನಡೆಸಲಿಕ್ಕೆ ಸಿದ್ಧ ಇಲ್ಲ. (ಎಂದು ಇಬ್ಬರಿಂದ ತಪ್ಪಿಸಿಕೊಳ್ಳುತ್ತಿರುವಾಗ)

ವಿ. ನಾಯಕ:- (ಚಡಪಡಿಸಿ) ಛೇ. ಏನ್ ಹೇಳ್ತೀರಿ ನೀವು? ಹಾಗೆ ಹೇಳ್ಬೇಡಿ...... ನಮ್ಮನ್ನ ನಮ್ಮನೆ ಜೀವಕ್ಕೆ ಏನಾದ್ರೂ ಆದ್ರೆ—

ವ್ಯಕ್ತಿ:- (ನಗುತ್ತಾ) ನಾನು ಸಾಯುತ್ತೇನೆ ಅಂತೀಯಾ? ಇಂಥಾದನ್ನ ನೋಡೋದಕ್ಕಿಂತ ಸಾಯೋದು ಒಳ್ಳೇದು. (ಎಂದು ತಟ್ಟನೆ ಹೊರಗೆ ಜಾರಿ ಹೋಗುವನು)

ಇಬ್ಬರೂ:- ರಾಯರೆ, ರಾಯರೆ—(ಎನ್ನುತ್ತಾ ಅವನ ಹಿಂದೆ ಧಾವಿಸುವರು). (ಹೆಂಡತಿ ಮಗಳು ಚಹದ ಕಪ್ಪನ್ನು ತರುವಳು)

ಹೆಂಡತಿ :— (ಯಾರೂ ಇಲ್ಲದ್ದನ್ನು ನೋಡಿ) ಅಯ್ಯೋ. ಇವ ಕಾಣದೇನೇ ಹೋಗಿಬಿಟ್ಟರಲ್ಲ. ಇವರು ಎಲ್ಲಾರೂ (ಎಂದು ಒಂದು ಸಾ ಇನ್ನುಯಾವಾಗ ಕಾಣಿತಾರೋ ಇಲ್ಲ ಕಾಣತಾರೋ).

(ಬಾಗಿಲ ಹೊರಗೆ ಹೋಗಿ ನೋಡಿ ಬಂದು ನಿಧಾನವಾಗಿ ಹೆಜ್ಜೆಗಳಿಂದ ಒಳಗೆ ಹೋಗುವಾಗ—ಕತ್ತಲೆ)

(ಇಲ್ಲಿ ತೋರಿಸಬೇಕಾದ ದೃಶ್ಯದ ಉದ್ದೇಶವೆಂದರೆ ವ್ಯಕ್ತಿ ಪಾತ್ರದ ಅವಸ್ಥೆ, ಇಲ್ಲಿ ಜೋರಾಗಿ ಗಲಾಟೆ ನಗರದಲ್ಲಿ ನಡೆದಿದೆ ಎಂದೇ.. ಗೃಹೀತವಾಗಿಟ್ಟುಕೊಂಡು ದೃಶ್ಯವನ್ನು ಪ್ರಾರಂಭಿಸಬೇಕು. ಕೂಗಾಟ, ರಂಪಾಟಗಳಿಲ್ಲದೆ ರಂಗಸ್ಥಳದ ಮೇಲೆ ಅತ್ತಿಂದಿತ್ತ ಓಡುವ ಜನರು, ಅವರು ಕೆಳಗಿನಿಂದ ಕಲ್ಲುಗಳನ್ನು ಆರಿಸಿಕೊಂಡು ತೂರುವರು. ಒಂದು ದಿಕ್ಕಿಂದ 3-4 ಪೋಲೀಸರು ಲಾಠೀ ಸಹಿತ ಬಂದೊಡನೆ ಈ ಜನರು ಓಡಿಹೋಗುವರು, ಒಮ್ಮೊಮ್ಮೆ ಒಬ್ಬಂಟಿಗ ಪೋಲೀಸನನ್ನೇ ಕ್ರೂರವಾದ ದನಿ, ನಗೆಗಳಿಂದ ಜನರು ಅವನನ್ನು ಹಿಮ್ಮೆಟ್ಟುವುದು ಒಂದು ನಿಮಿಷದ ತರುವಾಯ ಲಾಠಿ ಮಾಡಿದ ಬಳಿಕ, ಬೇರೆ ಸಾಮಾನುಗಳನ್ನು ಎತ್ತಿಕೊಂಡು ಹೋಗುವ ಜನರು— ಒಟ್ಟಾರೆ 2-3 ನಿಮಿಷ (ಹೆಚ್ಚು ಎಂದರೆ ಕೂಡದು) ಪರಿಸ್ಥಿತಿಯ ಪರಿಣಾಮ—ಕಾರಕವಾದ ಚಿತ್ರವನ್ನು ನಿರ್ದೇಶಕನು ರಂಗಸ್ಥಳದಲ್ಲಿ, ಪ್ರೇಕ್ಷಕರಿಗೆ ಮನಮುಟ್ಟುವಂತೆ ಮಾಡಬೇಕು.

ಅಷ್ಟರಲ್ಲಿ ಇದನ್ನೆಲ್ಲಾ ನೋಡಿ ಗಾಬರಿಯಾದ ವ್ಯಕ್ತಿ ಬಂದು, ಲಾಠಿಯನ್ನು ಕ್ರೌರ್ಯವನ್ನು ತಡೆಯುವ ಯತ್ನದಲ್ಲಿ ಓಡುವ ಜನ ಅವನಿಗೆ, ರಂಗಸ್ಥಳದ ಎಡಕ್ಕೂ ಬದಿಗಳಿಂದ ಬಂದು, ಡಿಕ್ಕಿಹೊಡೆಯುವರು ಅವನು ಸುರಾವಟ್ಟನಂತೆ ಅತ್ತಿತ್ತ ತತ್ತರಿಸುವನು, ಮುಗ್ಗುವನು, ಬೀಳುವಾಗ ಪ್ರಯತ್ನದಿಂದ ಸುಧಾರಿಸಿಕೊಳ್ಳುವನು. ಆಗಾಗ. ಛೇ. ಛೇ.ಛೇ. ಅನ್ಯಾಯ ಇದು, ಲಾಠಿ ಯಾಕೆ ಮಾಡ್ತೀರಿ, ಅಲ್ಲ ಕಟ್ಟಿಗೆ, ಬಾಗಿಲಿಗೆ, ದಸ್ತೀದ ಬೀಸಣಿಕೆ ಬಟ್ಟಲು ಒಗೆದರೆ 'ಎಷ್ಟಂತ..'' ಹೆಂಗಸು ಮಕ್ಕಳನ್ನು ಕೆಳಗೆ ಇರಿಸಿ ಅದರೂ— ಘೋರದಿಂದ 'ಬುದ್ಧನೊಬ್ಬ ಬಲವಾಗಿ ದಿಕ್ಕಿಂದನ್ನು ಹೊಡೆಯುವನು, ಅದರಿಂದ ಸುಧಾರಿಸಿ— ಕೊಳ್ಳಬೇಕೆಂಬ ಇನ್ನೊಂದು ದಿಕ್ಕಿನಿಂದ ಇನ್ನೊಬ್ಬನೂ ಹಾಗೆ ಡಿಕ್ಕಿ—ಹೊಡೆದೊಡನೆ , ಮುಂದೆ ಮುಗ್ಗರಿಸಿ ಕೈಯನ್ನೂರಲು ಅಸಮರ್ಥನಾಗಿ, ಏಳಲು ಅಶಕ್ತನಾಗಿ, ಹಾಗೇ ಬೋರಲು ಬೀಳುವನು. ಇಲ್ಲಿ ಗುಂಡಿನ ಶಬ್ದಗಳು ಕೇಳಿಸಿದೊಡನೆ ಜನ ಸಮುದ್ರದಂತೆ ಒಬ್ಬರೊಬ್ಬರನ್ನು ನೂಕುತ್ತಾ, ಓಡುವಾಗ ಅನೇಕರು ವ್ಯಕ್ತಿಯನ್ನು ಬೆನ್ನಿನ ಮೇಲೆ ತುಳಿದು ಹೋಗುವರು. ಈ ಜನರ ಸಂಖ್ಯೆ ಕಡಿಮೆಯಾಗುತ್ತಾ ಗುತ್ತಾ ಒಮ್ಮೆಲೆ ಎಲ್ಲವೂ ಶಾಂತವಾಗುವುದು.

ಈ ಶಾಂತತೆಯ ಒಂದು ನಿಮಿಷದ ತರುವಾಯ ಹಾಸ್ಪಿಟಲಿನ ಇಬ್ಬರು ಕೆಲಸಗಾರರು ಸ್ಟ್ರೆಚರ್ ತಕ್ಕೊಂಡು ಅತ್ತಿತ್ತ ಗಾಯಗೊಂಡವರನ್ನು ಹುಡುಕುವಂತೆ ಮಾಡುವಾಗ ಒಮ್ಮೆಲೆ ವ್ಯಕ್ತಿಯನ್ನು ನೋಡಿ ಓಡಿ ಬಂದು ಅವನನ್ನು ಅಂಗಾತವಾಗಿ ತಿರುಗಿಸುವಾಗ ಒಬ್ಬರನ್ನೊಬ್ಬರು ಸಾಭಿಪ್ರಾಯವಾಗಿ ನೋಡುವರು. ಅಂಗಾತನಾದ ಮೇಲೆ ಪ್ರೇಕ್ಷಕರತ್ತ ಅವನ ಕೈಯನ್ನು ಎತ್ತಿ—ಬಿಡಲು ಅದು ನೆಲಕ್ಕೆ ಅಪ್ಪಳಿಸುವುದು.

ಈ ಪಾಪಿ ಸತ್ತು ಹೋಗಿದೆ. ಎಂಬುದನ್ನು ಅಂಗೈ ಬಾಡಿಸುವುದರಿಂದ ಸೂಚಿಸಿ, ಒಬ್ಬನು ತಲೆಯನ್ನು ಇನ್ನೊಬ್ಬನು ಕಾಲುಗಳನ್ನು ಹಿಡಿದು ಎತ್ತುವಾಗ—

ಕತ್ತಲೆ.

ದೃಶ್ಯ ಮುಗಿಯುವುದು.